ಧಾರವಾಡ * ಕಾರವಾರ * ಹಾವೇರಿ * ಕೊಪ್ಪಳ * ಬಳ್ಳಾರಿ * ಬಾಗಲಕೋಟ * ವಿಜಯನಗರ * ಗದಗದಿಂದ ಏಕ ಕಾಲಕ್ಕೆ ಒಂದೇ ಸಂಚಿಕೆ ಪ್ರಕಟಗೊಳ್ಳುವ ದಿನ ಪತ್ರಿಕೆ



# ಸ್ನೇಹ ಜೀವಿ

ಉತ್ತರ ಕರ್ನಾಟಕದ ಧ್ವನಿ...!

SNEHAJEEVI KANNADA DAILY

ಕನ್ನಡ ದಿನಪತ್ರಿಕೆ




ಡಾ. ಎ.ಎನ್. ಶಾಲಗಾರ ಸಾರಥ್ಯದಲ್ಲಿ | MAG: PRBCR-10/2016-17 | Mob: 94827 70999 | e-mail: snehajeevidaily@gmail.com | Editor: Dr. A.N. Shalagar

RNI NO. KARKAN/2013/49379 | Volume / ಸಂಪುಟ : 14| Issue / ಸಂಚಿಕೆ : 216 Date : 06-09-2025 ಶನಿವಾರ Page / ಪುಟ : 4 | ಗದಗ–GADAG | Rs. 2/-

ಪುಟ -4 ಶಾಸಕ ಬಿ.ಪಿ. ಹರೀಶ್ ವಿರುದ್ಧ ಕಾನೂನು ಕ್ರಮಕ್ಕೆ ಮಹಿಳಾ ಆಯೋಗ ಮನವಿ

ಪುಟ -2 ಸಾಂಕ್ರಾಮಿಕ ರೋಗಗಳು ಬಾರದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿ

ಪುಟ -3 ಡಾ. ರಾಧಾಕೃಷ್ಣನ್‌ರವರ ಶಿಸ್ತು, ಶ್ರದ್ಧೆ ನಮಗೆಲ್ಲ ಮಾದರಿ

ಪುಟ -4 ಪತ್ರಕರ್ತ ಪ್ರಕಾಶ ಗುಳೇದಗುಡ್ಡ ಹೃದಯಾಘಾತದಿಂದ ನಿಧನ

# 'ಇಸ್ಲಾಂ ಎಂದರೆ ಶಾಂತಿ,ಮಹಮ್ಮದ್ ಪ್ರವಾದಿ ಎಂದರೆ ಶಾಂತಿದೂತ' ;ಮಿಲಾದ್–ಉನ್–ನಬಿ ಸಮ್ಮೇಳನದಲ್ಲಿ ಸಿದ್ದರಾಮಯ್ಯ ಶ್ಲಾಘನೆ

**ಪರಧರ್ಮ ಸಹಿಷ್ಣುತೆ ಸಂವಿಧಾನದ ಮೂಲ ಆಶಯವಾಗಿದ್ದು ಸಂವಿಧಾನದ ಪಾಲನೆಯೇ ನಮ್ಮೆಲ್ಲರ ಗುರಿಯಾಗಲಿ.**

❑ ಸ್ನೇಹಜೀವಿ ನ್ಯೂಸ್

ಬೆಂಗಳೂರು: ಇಸ್ಲಾಂ ಎಂದ್ರೆ ಶಾಂತಿ,ಮಹಮ್ಮದ್ ಪ್ರವಾದಿ ಅಂದ್ರೆ ಶಾಂತಿ ದೂತ ಅಂತ ಸಿಎಂ ಸಿದ್ದರಾಮಯ್ಯ ಶ್ಲಾಘಿಸಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಅಂತರಾಷ್ಟ್ರೀಯ ಮಿಲಾದ್–ಉನ್–ನಬಿ ಸಮ್ಮೇಳನದಲ್ಲಿ ಭಾಗಿಯಾಗಿ ಮಾತನಾಡಿದ ಅವರು,ಎಲ್ಲ–ರಿಗೂ ಈದ್ ಮಿಲಾದ್ ಅಂತಾರಾಷ್ಟ್ರೀಯ ಹಬ್ಬದ ಶುಭಾಶಯ ಕೋರಿದ್ರು.

ಇನ್ನು ಕರ್ನಾಟಕ ಜಾಯಿಂಟ್ ಮಿಲಾದ್ ಸಮಿತಿಯಿಂದ ನಡೆದ ಈ ಸಮ್ಮೇಳನದಲ್ಲಿ ಸಚಿವ ಜಮೀರ್ ಅಹಮದ್,




ಸಿಎಂ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಸೇರಿದಂತೆ ಮುಸ್ಲಿಂ ನಾಯಕರು, ಮುಸ್ಲಿಂ ಧರ್ಮಗುರುಗಳು ಭಾಗಿಯಾಗಿದ್ದರು. ಎಲ್ಲರಿಗೂ ಈದ್ ಮಿಲಾದ್ ಅಂತರರಾಷ್ಟ್ರೀಯ ಹಬ್ಬದ ಶುಭಾಶಯಗಳನ್ನ ಕೋರುತ್ತೇನೆ ಅಂತ ಮಾತು ಆರಂಭಿಸಿದ ಸಿದ್ದರಾಮಯ್ಯ, ದೇಶದ ನಾನಾ ಭಾಗಗಳಿಂದ ಮುಸ್ಲಿಂ ಧರ್ಮಗುರುಗಳು ಬಂದಿದ್ದಾರೆ.

ಈ ವರ್ಷ ವಿಶೇಷವಾಗಿ ಎಲ್ಲರೂ ಒಗ್ಗೂಡಿ ಆಚರಣೆ ಮಾಡುತ್ತಿದ್ದೇವೆ. ನೀವು ಬರಬೇಕೆಂದು ಬಹಳ ಸಂತೋಷದ ವಿಚಾರವನ್ನ ಜಮೀರ್ ಅಹಮದ್ ಹೇಳಿದ್ರು. ಹೀಗಾಗಿ ಅತ್ಯಂತ ಸಂತೋಷದಿಂದ ಈ ಸಮ್ಮೇಳನವನ್ನ ಉದ್ಘಾಟಿಸಿದ್ದೇನೆ ಎಂದರು.

ಪ್ರವಾದಿಯವರ ಬೋಧನೆ ಅನೇಕ ಬದಲಾವಣೆ ತಂದಿದೆ.ಈದ್ ಅಂದ್ರೆ ಹಬ್ಬ, ಮಿಲಾದ್‌ಹಬಿ ಅಂದ್ರೆ ಪ್ರವಾದಿ ಮಹಮದ್ ಹುಟ್ಟಿದ ದಿನ ಎಂದರ್ಥ. ಅತ್ಯಂತ ಸಂಭ್ರಮ ಸಡಗರದಿಂದ ಪ್ರವಾದಿ ಜನುಮ ದಿನ ಆಚರಣೆ ಮಾಡುತ್ತಿದ್ದೀರಿ. ನಾನು ಕೂಡ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಗೌರವ ಸಲ್ಲಿಸಿದ್ದೇನೆ ಎಂದರು. ಒಂದು ಅಂದಾಜಿನ ಪ್ರಕಾರ ಅವರು ಹುಟ್ಟಿ 1500 ವರ್ಷಗಳು ಕಳೆದಿವೆ. ಮಾನವ ಇತಿಹಾಸದಲ್ಲಿ ಪ್ರವಾದಿಯವರ ಬೋಧನೆಗಳು ಅನೇಕ ಕ್ರಾಂತಿಕಾರಿ ಬದಲಾವಣೆ ತಂದಿವೆ ಅಂತ ಸಿಎಂ ಅಭಿಪ್ರಾಯಪಟ್ಟರು.

**ಇಸ್ಲಾಂ ಎಂದ್ರೆ ಶಾಂತಿ, ಮಹಮದ್ ಪ್ರವಾದಿ ಅಂದ್ರೆ ಶಾಂತಿದೂತ ಅಂತ ಸಿಎಂ ಸಿದ್ದರಾಮಯ್ಯ ಶ್ಲಾಘಿಸಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಅಂತರಾಷ್ಟ್ರೀಯ ಮಿಲಾದ್–ಉನ್–ನಬಿ ಸಮ್ಮೇಳನದಲ್ಲಿ ಭಾಗಿಯಾಗಿ ಅವರು ಮಾತನಾಡಿದರು.**

## ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬ್ಯಾಲೆಟ್ ಬಳಕೆ; ಕಾನೂನಿನಲ್ಲಿ ಅವಕಾಶ ಇದೆಯಾ? ಡಿಸಿಎಂ




❑ ಸ್ನೇಹಜೀವಿ ನ್ಯೂಸ್

ಬೆಂಗಳೂರು: ಕರ್ನಾಟಕದ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಎಲೆಕ್ಟ್ರಾನಿಕ್ ವೋಟಿಂಗ್ ಯಂತ್ರ ಬದಲಿಗೆ ಬ್ಯಾಲೆಟ್ ಪೇಪರ್ ಬಳಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಈ ನಿರ್ಧಾರ ರಾಜ–ಕೀಯ ಚರ್ಚೆಗೆ ಗ್ರಾಸವಾಗಿದೆ.

ರಾಜ್ಯ ಸರ್ಕಾರದ ನಡೆಯನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದ್ದು, ಇದು ಕಾಂಗ್ರೆಸ್‌ನ ರಾಜಕೀಯ ತಂತ್ರವೆಂದು ಆರೋಪಿಸಿದೆ.

ಇತ್ತ ಹುಬ್ಬಳ್ಳಿಯಲ್ಲಿ ರೈತ ಮುಖಂಡರು ಸರ್ಕಾರದ ನಿರ್ಧಾರವನ್ನು ಸ್ವಾಗತ ಮಾಡಿದ್ದಾರೆ.

### ಬಿಜೆಪಿಯವರಿಗೆ ಯಾಕೆ ಗಾಬರಿ?

ಈ ಕುರಿತಂತೆ ಸ್ಪಷ್ಟನೆ ನೀಡಿರುವ ಡಿಸಿಎಂ ಡಿಕೆ ಶಿವಕುಮಾರ್, ಯಾವುದೇ ಕ್ಷಣದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಘೋಷಣೆಯಾಗಬಹುದು.ಆದ್ದರಿಂದ, ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಸಿದ್ಧರಾಗಬೇಕು. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬ್ಯಾಲೆಟ್ ಪೇಪರ್ ಬಳಕೆಗೆ ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಬಿಜೆಪಿಯವರಿಗೆ ಯಾಕೆ ಗಾಬರಿ? ಕಳ್ಳನ ಮನಸ್ಸು ಹಳ್ಳುಲ್ಲಗೆ ಎಂಬಂತೆ ಅವರ ಆತಂಕ ತೋರಿಕೆಯಾಗುತ್ತಿದೆ," ಎಂದು ಟೀಕಿಸಿದ್ದಾರೆ.

## ಸುಂಕ ಹೆಚ್ಚಳ: ಭಾರತದ ಜೊತೆ ವ್ಯವಹಾರವಿಲ್ಲ



**ವಾಷಿಂಗ್ಟನ್,ಸೆ.5:– ಅಮೆರಿಕಾದ ಉತ್ಪನ್ನಗಳಿಗೆ "ಭಾರತ ಹೆಚ್ಚಿನ ಸುಂಕ ವಿಧಿಸುತ್ತಿದೆ. ಇದು ವಿಶ್ವದಲ್ಲೇ ಅತಿ ಹೆಚ್ಚು ಎಂದು ಹೇಳಿರುವ ಅಮೆ–ರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಕಾರಣಕ್ಕಾಗಿಯೇ ಭಾರತದೊಂದಿಗೆ ಹೆಚ್ಚು ವ್ಯವಹಾರ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.**

ಭಾರತ, ನಮ್ಮೊಂದಿಗೆ ವ್ಯಾಪಾರ ಮಾಡುತ್ತಿದ್ದರು. ಹೀಗಾಗಿ ನಾವು ಅವರಿಗೆ ಶುಲ್ಕ ವಿಧಿಸುತ್ತಿರಲಿಲ್ಲ, ಈ ವಿಷಯದಲ್ಲಿ ನಮ್ಮದೂ ಮೂರ್ಖತನವೂ ಇರಬಹುದು, ಆದರೆ ಅಮೆರಿಕಾದ ಉತ್ಪನ್ನಗಳಿಗೆ ಭಾರತದಲ್ಲಿ ಅತಿ ಹೆಚ್ಚು ಸುಂಕ ವಿಧಿಸಲಾಗುತ್ತಿದೆ ಎಂದಿದ್ದಾರೆ.

ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಅಮೆರಿಕಾದ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದ ಹಿನ್ನೆಲೆಯಲ್ಲಿ ನಾವೂ ಕೂಡ ಭಾರತದ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದ್ದೇವೆ ಎಂದು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

## ಅತಿವೃಷ್ಟಿಯಿಂದ ಹಾನಿಗೊಳಗಾಗಿ ಸಂಕಷ್ಟದಲ್ಲಿರುವ ರೈತರಿಗೆ,ಹೋರಾಟಕ್ಕೆ ಸಾಥ್



❑ ಸ್ನೇಹಜೀವಿ ನ್ಯೂಸ್

ಧಾರವಾಡ,ಸೆ 5: ಅತಿವೃಷ್ಟಿಯಿಂದ ಹಾನಿಗೊಳಗಾಗಿ ಸಂಕಷ್ಟದಲ್ಲಿರುವ ರೈತರಿಗೆ, ಮಲತಾಯಿ ಧೋರಣೆ ತೋರುತ್ತಿರುವದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಜರುಗುತ್ತಿರುವ ಅಹೋರಾತ್ರಿ ಹೋರಾಟದಲ್ಲಿ ಮಾಜಿಮಹಾಪೌರ ಹಾಗೂ ಸಭಾನಾಯಕರಾದ ಈರೇಶ ಅಂಚಟಗೇರಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಂ–ಚಟಗೇರಿ, ನಿದ್ದೆಯಲ್ಲಿರುವ ರಾಜ್ಯ ಸರ್ಕಾರ ಕೂಡಲೆ ಎಚ್ಚೆತ್ತುಕೊಂಡು ರೈತರಿಗೆ ಶೀಘ್ರವಾಗಿ ಪರಿಹಾರ ನೀಡಲು ಆಗ್ರಹಿಸಿದರು.

ಮಳೆಯಿಂದ ಮನೆ ಹಾನಿಯಾದವರಿಗೆ 10ಲಕ್ಷ ಪರಿಹಾರ ಹಾಗೂ ತತಕ್ಷಣವಾಗಿ 50, 000 ರೂಪಾಯಿ ರೈತರಿಗೆ ವರ್ಗಾಯಿಸಬೇಕಾಗಿ ಹಾಗು ಕೂಡಲೇ ಎಲ್ಲಾ ಸರ್ವೆಗಳನ್ನು ಸರಿಯಾಗಿ ಮಾಡಿ ವರದಿ ಒಪ್ಪಿಸಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕಿ ಸೀಮಾ ಮಸೂತಿ, ಗಂಗಾಧರ ಪಾಟೀಲ ಕುಲಕರ್ಣಿ,ಸವಿತಾ ಅಮರಶೆಟ್ಟಿ.ಶಶಿ ಕುಲಕರ್ಣಿ, ಶಂಕರಕೊಮಾರ ದೇಸಾಯಿ, ಶಂಕರ ಶೆಳಕೆ ,ಬಸು ಬಾಳಗಿ ಹಾಗೂ ರೈತ ಮುಖಂಡರು ಉಪಸ್ಥಿತರಿದ್ದರು.

## ಡಿಸಿಎಂ ವಿರುದ್ಧ ಅಶೋಕ್ ಕಿಡಿ



ಬೆಂಗಳೂರು,ಸೆ.5:ರೈತರು ಧಿಕ್ಕಾರ ಕೂಗುವುದು ಬಿಟ್ಟು ಬೇರೇನೂ ಮಾಡಕಾಗಲ್ಲ ಎಂದು ರೈತರು ಅಸಹಾಯಕರು ಎನ್ನುವ ರೀತಿಯಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೀಯಾಳಿಸಿ ಮಾತನಾಡಿದ್ದಾರೆ. ರೈತರ ಬಗ್ಗೆ ಮಾತನಾಡುವಾಗ ಎಚ್ಚರವಿರಬೇಕು ಎಂದು ಪ್ರತಿಪಕ್ಷ ನಾಯಕ ಅಶೋಕ್, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ವಿರುದ್ಧ ಕಿಡಿಕಾರಿದ್ದಾರೆ.

ಈಗ ರೈತರು ಅಸಹಾಯಕರೆನ್ನುವ ರೀತಿ ಮಾತನಾಡಿದ್ದಾರೆ ಇದು ಸರಿಯಲ್ಲ ಎಂದು ಅಶೋಕ್ ಹೇಳಿದ್ದಾರೆ.

ಇಡೀ ದೇಶಕ್ಕೆ ಅನ್ನ ನೀಡುವ ರೈತ ಜೀವನವಿಡೀ ತಾನು ಬದುಕುವುದು, ದುಡಿಯುವುದು ಎಲ್ಲವೂ ಇನ್ನೊಬ್ಬ–ರಿಗಾಗಿಯೇ ಹೊರತು ತನ್ನ ಸ್ವಂತಕ್ಕೆ ಅಲ್ಲ ಶಿವಕುಮಾರ್ ಅವರೇ, ಕೈಗಾರಿಕೆಗಳಿಗೆ, ರೈಲು, ರಸ್ತೆ, ವಿಮಾನನಿಲ್ದಾಣಕ್ಕೆ ಎಲ್ಲದ್ದಕ್ಕೂ ರೈತರ ಜಮೀನು ಪಡೆಯಲಾಗಿದೆ. ತಮ್ಮ ಜೀವನಾಧಾರವಾಗಿರುವ ಜಮೀನನ್ನು ಕಳೆದುಕೊಳ್ಳುತ್ತಿರುವ ರೈತರ ಬಳಿ ಹೇಗೆ ಮಾತನಾಡಬೇಕು,

ರೈತರ ಕಷ್ಟ, ಕೃಷಿಯಲ್ಲಿರುವ ಸಮಸ್ಯೆಗಳ ಬಗ್ಗೆ ಗೊತ್ತಿರುವ ನಿಜವಾದ ಒಕ್ಕಲಿಗ ಅನ್ನದಾತರ ಬಗ್ಗೆ ಈ ರೀತಿಯ ದರ್ಪದ ಮಾತುಗಳನ್ನು ಎಂದಿಗೂ ಆಡುವುದಿಲ್ಲ. ಒಕ್ಕಲಿಕೆಯನ್ನು, ಮಣ್ಣಿನ ಮಕ್ಕಳನ್ನು ಅಪಮಾನ ಮಾಡುತ್ತಿರುವ ತಮ್ಮ ಈ ದುರ್ನಡತೆಯ ಪರಿಣಾಮ ಮುಂದೆ ಗೊತ್ತಾಗಲಿದೆ ಎಂದು ಅಶೋಕ್ ಹೇಳಿದ್ದಾರೆ.

# ರಾತ್ರಿ ಕ್ಯಾಬ್ ಡ್ರೈವಿಂಗ್ ಕೆಲಸಕ್ಕೆ ಹೋಗ್ತಿದ್ದ ಪತಿ : ಇತ್ತ ಪ್ರಿಯಕರನೊಂದಿಗೆ ಚಕ್ಕಂದ ಆಡ್ತಿದ್ದ ಪತ್ನಿ

❑ ಸ್ನೇಹಜೀವಿ ನ್ಯೂಸ್

ಆನೇಕಲ್: ಈಕೆ ಕಾಮದಾಟ 11 ವರ್ಷಗಳ ಪ್ರೀತಿ–ಮದ್ವೆ ಸಂಬಂಧಕ್ಕೆ ಎಳ್ಳು ನೀರು ಬಿಟ್ಟ ಬಸವನಪುರ (ಬನ್ನೇರುಘಟ್ಟ ಸಮೀಪ) ಗ್ರಾಮದ ಬ್ಯೂಟಿಯ ಬಗ್ಗೆ ಇನ್ನಷ್ಟು ರಹಸ್ಯಗಳು ಬಯಲಾಗಿವೆ. 3 ಮಕ್ಕಳ ತಾಯಿಯಾಗಿದ್ದ ಈಕೆ ಒಂದಲ್ಲ ಎರಡಲ್ಲ ಮೂವರೊಟ್ಟಿಗೆ ಸಂಪರ್ಕದಲ್ಲಿದ್ದಳು ಅನ್ನೋದು ತಿಳಿದುಬಂದಿದೆ.

2 ವರ್ಷಗಳಿಂದ ಸತೋಷ್ ಜೊತೆ ಲವ್ವಿ ಡವ್ವಿ ಶುರು ಮಾಡಿಕೊಂಡಿದ್ದ ಆಂಟಿ ಲೀಲಾವತಿ ಇನ್ನೊಬ್ಬಾತನೊಂದಿಗೂ ಸಂಪರ್ಕದಲ್ಲಿದ್ದಳು ಅನ್ನೋದಕ್ಕೆ ಫೋಟೋ ಸಾಕ್ಷ್ಯ ಸಿಕ್ಕಿದೆ.

### ಲವ್ವಿ ಡವ್ವಿ ಶುರುವಾಗಿದ್ದು ಹೇಗೆ?

ಬಸವನಪುರದಲ್ಲಿ ವಾಸವಿದ್ದ ಲೀಲಾವತಿ, ಮಂಜುನಾಥ್ ದಂಪತಿ 11 ವರ್ಷಗಳ ಹಿಂದೆ ಪ್ರೀತಿಸಿ ಮದ್ವೆಯಾಗಿದ್ದರು . ಮಂಜುನಾಥ್ ಕ್ಯಾಬ್ ಡ್ರೈವರ್ ಆಗಿ ಕೆಲಸ ಮಾಡ್ತಿದ್ದ.ರಾತ್ರಿ ಕ್ಯಾಬ್ ಡ್ರೈವಿಂಗ್ ಕೆಲಸಕ್ಕೆ ಹೋಗ್ತಿದ್ದಂತೆ,ಸಂತೋಷ್ ಮನೆಗೆ ಬರುತ್ತಿದ್ದ.ಆಗ ಈಕೆ ಸಂತೋಷ್ ಜೊತೆಗೆ ಚಕ್ಕಂದ ಶುರು ಮಾಡಿಕೊಳ್ತಿದ್ಳು.

ಕೆಲ ದಿನಗಳ ಬಳಿಕ ಲೀಲಾವತಿ




ನಡವಳಿಕೆಯಿಂದ ಪತಿ ಮಂಜುನಾಥ್ ಅನುಮಾನಗೊಂಡಿದ್ದ. ಈಕೆ ಕಾಮದಾಟವನ್ನು ಬಯಲಿಗೆಳೆಯಬೇಕು ಅಂತ ಭಾನುವಾರ ಕೆಲಸಕ್ಕೆ ಹೋಗುವುದಾಗಿ ಹೇಳಿ, ಮನೆಯ ಸಮೀಪವೇ ಕಾರಿನಲ್ಲಿ ಕುಳಿತಿದ್ದ. ರಾತ್ರಿ ಲೀಲಾವತಿ ಫೋನ್ ಮಾಡಿ ಎಲ್ಲಿದ್ದೀಯಾ ಅಂತ ಕೇಳಿದಾಗ ಹೆಚ್‌ಎಎಲ್ ಬಳಿ ಇದ್ದೀನಿ ಅಂತ ಮಂಜುನಾಥ್ ಹೇಳಿದ್ದ. ಆಗ ಲೀಲಾವತಿ, ಸಂತೋಷ್‌ಗೆ ಫೋನ್ ಮಾಡಿ ಮನೆಗೆ ಕರೆಸಿಕೊಂಡು ಕಾಮದಾಟ ಶುರು ಮಾಡಿಕೊಂಡಿದ್ಳು. ಅಷ್ಟರಲ್ಲಿ ಮನೆಗೆ ಎಂಟ್ರಿ ಕೊಟ್ಟ ಪತಿ, ರೆಡ್‌ಹ್ಯಾಂಡಾಗಿ ಇಬ್ಬರನ್ನು ಹಿಡಿದಿದ್ದ. ಈ ವೇಳೆ ಜೋರು ಗಲಾಟೆಯೂ ನಡೆದಿತ್ತು. ಬಳಿಕ ಈ ಪ್ರಕರಣ ಬನ್ನೇರುಘಟ್ಟ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು.

ಠಾಣೆಯಲ್ಲಿ ಪತಿ ಮನವೊಲಿಸಲು ಪ್ರಯತ್ನಿಸಿದ ಹೊರತಾಗಿಯೂ ವಿಫಲವಾಯಿತು. ತಾಳಿಯನ್ನ ಕಿತ್ತು ಮಂಜುನಾಥ್ ಕೈಗೆ ಕೊಟ್ಟವಳೇ ಪೊಲೀಸ್ ಠಾಣೆಯಿಂದ ನೇರವಾಗಿ ಸಂತೋಷ್ ಹೊರಟೇಬಿಟ್ಟಳು. ಇತ್ತ ಹೆಂಡ್ತಿ ಬೇಕೆಂದು ಪತಿ ಮಂಜುನಾಥ್ ಕಣ್ಣೀರು, ತಾಯಿ ಬೇಕೆಂದು ಮಕ್ಕಳು ಕಣ್ಣೀ–ರಿಡುವಂತಾಗಿದೆ.

### ಆ ದಿನ ಘಟನೆ ಏನಾಯ್ತು?

ಬಸವನಪುರದಲ್ಲಿ ವಾಸವಿದ್ದ ಲೀಲಾವತಿ, ಮಂಜುನಾಥ್ ದಂಪತಿ 11 ವರ್ಷಗಳ ಹಿಂದೆ ಪ್ರೀತಿಸಿ ಮದ್ವೆಯಾಗಿದ್ದರು. ಮಂಜುನಾಥ್ ಕ್ಯಾಬ್ ಡ್ರೈವರ್ ಆಗಿ ಕೆಲಸ ಮಾಡ್ತಿದ್ದಾನೆ. ಕಳೆದ 2 ವರ್ಷಗಳ ಹಿಂದೆ ಲೀಲಾವತಿಗೆ ಪ್ರಿಯಕರ ಸಂತೋಷ್‌ನ ಪರಿಚಯವಾಗಿತ್ತು. ಇಬ್ಬರ ನಡುವೆ ಸಲುಗೆ ಹೆಚ್ಚಾಗಿ ಅಕ್ರಮ ಸಂಬಂಧ ಬೆಳೆದಿತ್ತು. ಸಾಕಷ್ಟು ಬಾರಿ ಮಂಜುನಾಥ್ ಇದನ್ನ ಪ್ರಶ್ನೆ ಮಾಡಿದ್ದ. ಆದರೂ ಬುದ್ಧಿ ಕಲಿಯದ ಲೀಲಾವತಿ ಭಾನುವಾರ ಮನೆಯಿಂದ ಎಸ್ಕೇಪ್ ಆಗಿದ್ದಳು.

ಈ ಕುರಿತು ಪತಿ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ.

**ಬಳಿಕ ಠಾಣೆಗೆ ಹಾಜರಾದ ಲೀಲಾವತಿ ತನಗೆ ಪ್ರಿಯಕರನೇ ಬೇಕೆಂದು ತಾಳಿ ಕಿತ್ತು ಗಂಡನ ಕೈಗೆ ಕೊಟ್ಟು ಹೋಗಿದ್ದಾಳೆ.**

### ಶಾಲಾ ಶಿಕ್ಷಣ ಸವಾಲುಗಳ ಕುರಿತು ಉಪನ್ಯಾಸ : ಎಫ್.ಸಿ.ಚೇಗರಡ್ಡಿ ಅಭಿಮತ

# ಅನ್ಯಕಾರ್ಯದ ಹೊರೆಯಿಂದ ಶಿಕ್ಷಣದ ಗುಣಮಟ್ಟ ಕುಸಿತ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ.5 : ಕಲಿಸುವದಕ್ಕೆ ಶಿಕ್ಷಕ ಸೀಮಿತವಾಗಿದ್ದ ಸಂದರ್ಭದಲ್ಲಿ ಶಿಕ್ಷಣದ ಗುಣಮಟ್ಟ ತೃಪ್ತಿದಾಯಕವಾಗಿತ್ತು. ಆದರೆ ಇಂದು ವಿವಿಧ ಕಾರ್ಯಗಳ ಹೊರೆಯಿಂದ ಬೋಧನೆ ಮತ್ತು ಕಲಿಕಾ ಸಮಯದ ಕೊರತೆಯಿಂದ ಶೈಕ್ಷಣಿಕ ಮಟ್ಟ ಕುಸಿತ ಕಂಡಿದೆ. ಶಿಕ್ಷಕರ ಕೊರತೆಯೂ ಇದಕ್ಕೆ ಕಾರಣವಾಗಿದೆ ಎಂದು ಶಿಕ್ಷಣ ಚಿಂತಕ ಎಫ್.ಸಿ.ಚೇಗರಡ್ಡಿ ಅಭಿಪ್ರಾಯಪಟ್ಟರು,

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿ ಗದಗ ವತಿಯಿಂದ ಗದುಗಿನ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನ, ಕ.ಸಾ.ಪ ಕಾರ್ಯಾಲಯದಲ್ಲಿ ಶಿಕ್ಷಕ ದಿನಾಚರಣೆ ಅಂಗವಾಗಿ ಜರುಗಿದ ಶೈಕಣಿಕ ಚಿಂತನಾ ಗೋಷ್ಠಿಯಲ್ಲಿ ಮಾತನಾಡಿದರು. ಶಾಲೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಅಂತರ್ಜಾಲದ ಮುಖಾಂತರ ದಾಖಲಿಸಬೇಕಾಗಿದೆ. ಅಕ್ಷರ ದಾಸೋಹ, ದಾಖಲೆಗಳ ನಿರ್ವಹಣೆ, ಫಲಿತಾಂಶ ವೃದ್ಧಿ ಮುಂತಾದ ಒತ್ತಡದಿಂದ ಶಿಕ್ಷಕ ಸಮುದಾಯ ಖುಷಿಯಿಂದ ಬೋಧನೆ ಮಾಡುವ ಸಂದರ್ಭಗಳಿಂದ ವಂಚಿತರಾಗಿದ್ದಾರೆ. ಸರಕಾರಿ ಶಾಲೆಗಳ ವಿಲೀನದಿಂದ ತಳಸಮುದಾಯಗಳು ಶಿಕ್ಷಣದಿಂದ ದೂರ ಉಳಿಯುವ ಅಪಾಯವಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಉಪನಿರ್ದೇಶಕ ಎ.ಎನ್.ನಾಗರಳ್ಳಿ ಮಾತನಾಡಿ, ಅನ್ಯ ಕಾರ್ಯಗಳ ಹೊರೆಯಿಂದ ಶಿಕ್ಷಕರನ್ನು ಮುಕ್ತಗೊಳಿಸುವ ಬಗ್ಗೆ ಇಲಾಖೆ ಚಿಂತಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ವಿನೂತನ ಪ್ರಯತ್ನಗಳ ಮೂಲಕ ಎಫ್.ಸಿ.ಚೇಗರಡ್ಡಿ ಅವರು ಗಮನ ಸೆಳೆದಿದ್ದಾರೆ. ಚಿಣ್ಣರ ಮೇಳ, ವಿಜ್ಞಾನ ಮೇಳ, ಮಕ್ಕಳ ಸಾಹಿತ್ಯ ಸಂಭ್ರಮದಂತಹ ಅನೇಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿ ಸಂತಸ ಕಲಿಕೆಯ ವಿಚಾರಗಳನ್ನು ನಾಡಿನಾದ್ಯಂತ ಪಸರಿಸಿದ್ದಾರೆ ಎಂದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರಡಿ ಮಾತನಾಡಿ, ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಶಿಕ್ಷಕ ಸ್ಪಂದಿಸಬೇಕಾಗುತ್ತದೆ. ಇಲಾಖೆಯ ಯೋಜನೆಗಳು ಎಲ್ಲ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಹಿನ್ನೆಲೆಯಲ್ಲಿಯೇ ರೂಪಿತವಾಗಿವೆ. ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ದಿಸೆಯಲ್ಲಿ ಶಿಕ್ಷಕ ಸಮುದಾಯ ಪ್ರಯತ್ನಿಸಿ, ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಶ್ರಮಿಸಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು, ಒತ್ತಡಗಳ ಮಧ್ಯೆಯೂ ಶಿಕ್ಷಕರು ಸ್ವಯಂ ಸ್ಫೂರ್ತಿಯಿಂದಲೇ ಕಾರ್ಯ ನಿರ್ವಹಣೆಯಿಂದ ಶಿಕ್ಷಣ ಕ್ಷೇತ್ರ ಇಂದಿಗೂ ಘನತೆಯನ್ನು ಹೊಂದಿದೆ. ಡೆಪ್ಯುಟಿ ಚನ್ನಬಸಪ್ಪನವರು ಕನ್ನಡ ಶಾಲೆಗಳ ಸ್ಥಾಪನೆಯ ಮೂಲಕ ಕನ್ನಡ ಸಂಸ್ಕೃತಿಯ ಹೆಚ್ಚಳಕ್ಕೆ ಕಾರಣರಾಗಿದ್ದಾರೆ. ಕನ್ನಡ ಬೆಳವಣಿಗೆಯ ಹಿನ್ನೆಲೆಯಲ್ಲಿ ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸುವ ದಿಸೆಯಲ್ಲಿ ಜನಾಂದೋಲನ ರೂಪಗೊಳ್ಳಬೇಕಾದುದು ಅವಶ್ಯಕ ಎಂದರು.

ವೇದಿಕೆ ಮೇಲೆ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ.ನಡುವಿನಮನಿ ಉಪಸ್ಥಿತರಿದ್ದರು. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಿ.ಎಸ್.ಬಾಪುರಿ ವಂದಿಸಿದರು.

ಎಸ್.ಡಿ.ಗಾಂಜಿ, ಅನ್ನದಾನಿ ಹಿರೇಮಠ, ರಾಹುಲ ಗಿಡ್ನಂದಿ, ಶೇಖರಪ್ಪ ಕಳಸಾಪೂರಶೆಟ್ಟರ, ಕೆ.ಎಸ್.ಬಾಳಿಕಾಯಿ, ಬಿ.ಎಸ್.ಹಿಂಡಿ, ಬಿ.ಬಿ.ಹೊಳಗುಂದಿ, ಎಂ.ಎಫ್.ದೋಣಿ, ಶೈಲಾ ಗಿಡ್ನಂದಿ, ಶರಣಪ್ಪ ಹೊಸಂಗಡಿ, ಎಸ್.ವಿ.ಕುಂದಗೋಳ, ರಾಜಶೇಖರ ಕರಡಿ, ಸಿದ್ಧಲಿಂಗೇಶ ಸಜ್ಜನಶೆಟ್ರ, ರತ್ನಕ್ಕ ಪಾಟೀಲ, ಮೀನಾಕ್ಷಿ ಜಂಗಮನಿ, ಶಶಿಕಲಾ ಬಳ್ಳೊಳ್ಳಿ, ಶಿವಲಿಂಗಪ್ಪ ಅಣ್ಣಿಗೇರಿ, ಎಸ್.ಎಂ.ಕಾತರಕಿ, ಶಿಲ್ಪಾ ಹಳ್ಳಿಕೇರಿ, ಪ್ರಕಾಶ ಕರ್ಕಿಕಟ್ಟಿ, ಸಿದ್ದು ಮಾಳವಾಡ, ಶಶಿಕಾಂತ ಕೊರ್ಲಹಳ್ಳಿ, ರಾಜಶೇಖರ ದಾನರಡ್ಡಿ, ಈರಪ್ಪ ಸೊರಟೂರ, ಸಿ.ಎಂ.ಮಾರನಬಸರಿ, ಎಸ್.ಎ.ಆವಾರಿ, ಎಸ್.ಸಿ.ಹಾಳಕೇರಿ, ಜಯದೇವ ಮೆಣಸಗಿ, ನಿಂಗು ಸೊಲಗಿ, ಎ.ಸಿ.ಹಿರೇಮಠ, ಕೆ. ಎಸ್.ಗುಗ್ಗರಿ, ಎಸ್.ಎಲ್.ಕುಲಕರ್ಣಿ, ಆರ್.ಎಂ.ತಾಣೇದ, ಎಸ್.ಐ.ಯಾಳಗಿ, ಅಶೋಕ ಗಿರಡ್ಡಿ, ಅಶೋಕ ಸತ್ಯರಡ್ಡಿ, ಎಂ.ಎಂ.ಕಾಗದಗಾರ, ಶ್ಯಾಮ ಲಾಂಡೆ, ಪ್ರೇಮಾ ಹಟ್ಟಿ, ರತ್ನಾಬಾಯಿ ಪುರಂತರ, ಎಂ.ಎಸ್.ಹಾಲಶೆಟ್ಟಿ, ಶಿಲ್ಪಾ ಮ್ಯಾಗೇರಿ, ಉಮಾ ಕಣವಿ, ಈಶ್ವರಪ್ಪ ಹಂಚಿನಾಳ, ಸುರೇಶ ಕುಂಬಾರ, ಬಿ.ಜಿ.ಗಿರಿತಿಮ್ಮಣ್ಣವರ, ರಮೇಶ ಲಮಾಣಿ, ಜಿ.ಬಿ.ಪಾಟೀಲ, ಬಿ.ವಾಯ್. ಡೊಳ್ಳಿನ, ವಿಶ್ವನಾಥ ಕಮ್ಮಾರ, ರವಿ ದೇವರಡ್ಡಿ ಮೊದಲಾದವರು ಭಾಗವಹಿಸಿದ್ದರು.

# ಆಸೆ-ಆಕಾಂಕ್ಷೆಗಳ ನಿರೋಧದಿಂದ ತನು-ಮನಗಳ ನಿಯಂತ್ರಣ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ.5 : ಇಚ್ಛೆಗಳನ್ನು ನಿಯಂತ್ರಿಸಿಕೊಂಡು ಮನುಷ್ಯ ಜನ್ಮವನ್ನು ವ್ರತನಿಯಮಾದಿಗಳ ಪಾಲನೆ ಮೂಲಕ ಸತ್ಫಲಗೊಳಿಸುವುದೇ ಉತ್ತಮ ತಪವಾಗಿದ್ದು, ಇದ್ದುದರಲ್ಲಿ ಇದ್ದದ್ದನ್ನು ಅನುಭವಿಸುವುದು ಅಂದರೆ ಸಹಜತೆಯಿಂದ ಬಾಳುವುದು ಜಾಣತನವಾಗಿದೆ ಎಂದು ಕುಮಾರಿ ರಂಜಿತಾ ಮೇಲಾಣಿ ಹೇಳಿದರು. ಅವರು ಗದಗ ಜಿಲ್ಲಾ ದಿಗಂಬರ ಜೈನ ಸಂಘವು 'ದಶಲಕ್ಷಣ ಪರ್ವಾಚರಣೆ ಮತ್ತು ಸಮಾಜ ಸಂಪರ್ಕ ಸಭೆ' ನಿಮಿತ್ತ ಸೊರಟೂರದ ಶಾಂತಿನಾಥ ಬಸದಿಯ ಸಭಾಭವನದಲ್ಲಿ ಆಯೋಜಿಸಿದ್ದ 'ಉತ್ತಮ ತಪಧರ್ಮ' ಕುರಿತು ಉಪನ್ಯಾಸ ಮಾಡುತ್ತ, ನಮ್ಮ ಶಕ್ತಿ, ಸಾಮರ್ಥ್ಯ, ಯೋಗ್ಯತೆಗಳಿಗೆ ಅನುಸಾರವಾಗಿ ಇಚ್ಛೆಗಳನ್ನು ದಮನಿಸಿ ತಪದ ಮಾರ್ಗದಲ್ಲಿ ಮುನ್ನಡೆದರೆ ತನು-ಮನಗಳ ಮೇಲೆ ನಿಯಂತ್ರಣ ಸಾಧ್ಯವೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಎನ್. ಮಲ್ಲಾಡದ ಅವರು ನಮ್ಮ ನಾಡಿನ ಅನೇಕ ಮಹಾಪುರುಷರು, ಮಹನೀಯರು ಉನ್ನತೋನ್ನತವಾದ ಪದವಿಗಳಿದ್ದರೂ ಅದನ್ನು ಇಚ್ಛಿಸದೇ ತೃಣಕ್ಕೆ ಸಮಾನವೆಂದು ಭಾವಿಸಿ ಉತ್ತಮ ತಪದ ಮೂಲಕ ಇಂದಿಗೂ ಸ್ಮರಣೀಯರಾಗಿದ್ದಾರೆಂದು ಹೇಳಿದರು. ಸಂಘದ ಅಧ್ಯಕ್ಷ ಪಿ.ಎ. ಕುಲಕರ್ಣಿ ಇಚ್ಛೆಗಳನ್ನು ನಿಯಂತ್ರಿಸಿಕೊಳ್ಳಲು ಮಹಾಪುರುಷರಷ್ಟೇ ಸಮರ್ಥರಲ್ಲ, ಉತ್ತಮ ಸಂಸ್ಕಾರಗಳನ್ನು ಮೈಗೂಡಿಸಿಕೊಂಡು 'ಬದುಕು, ಬದುಕಲು ಬಿಡು', 'ಪರಸ್ಪರೋಪಗ್ರಹೋ ಜೀವಾನಂ' ತತ್ವಗಳಿಗೆ ಬದ್ಧವಾಗಿ ಬಾಳಿದರೆ ಸಾಮಾನ್ಯರಿಂದಲೂ ಸಾಧ್ಯವಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಯಶವಂತ ಸಿದ್ದಣ್ಣವರ, ಪ್ರಕಾಶ ಮುತ್ತಿನ, ಶಿವಪ್ಪ ಹೋಳಗಿ, ಧರ್ಮಣ್ಣ ಹೊಸೂರ, ಚಂದ್ರಪ್ಪ ಮಲ್ಲಾಡದ, ಹನಮಂತಪ್ಪ ಬೆಂತೂರ, ಅಭಿನಂದನ ಬೆಂತೂರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಪತ್ರಕರ್ತೆ ರಾಧಾ ಹಿರೇಗೌಡರ್‌ಗೆ ಅವಮಾನ ಆರ್.ವ್ಹಿ. ದೇಶಪಾಂಡೆ ಕ್ಷಮೆಯಾಚಿಸಲಿ

❑ ಸ್ನೇಹಜೀವಿ ನ್ಯೂಸ್



ಗದಗ, ಸೆ.5 : ನಾಡಿನ ಹೆಮ್ಮೆಯ ಪತ್ರಕರ್ತರಾದ ಗ್ಯಾರಂಟಿ ನ್ಯೂಸ್ ಸಂಪಾದಕಿ ಶ್ರೀಮತಿ ರಾಧಾ ಹಿರೇಗೌಡರ್ ಅವರಿಗೆ ಅತ್ಯಂತ ಬೇಜವಾಬ್ಧಾರಿಯಿಂದ ಹಾಗೂ ಉಡಾಫೆಯ ಮಾತನಾಡಿರುವ ಆರ್.ವಿ.ದೇಶಪಾಂಡೆ ಸಮಸ್ತ ಸ್ತ್ರೀಕುಲಕ್ಕೆ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ಗದಗ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀಮತಿ ನಿರ್ಮಲಾ ಕೊಳ್ಳಿ ತಿಳಿಸಿದ್ದಾರೆ.

ಶ್ರೀಮತಿ ರಾಧಾ ಹಿರೇಗೌಡರ್ ಸಾಮಾಜಿಕ ಕಳಕಳಿಯಿಂದ ಆಸ್ಪತ್ರೆ ಬಗ್ಗೆ ಬೇಡಿಕೆ ಇಟ್ಟಾಗ, ತಾಯ್ತನ ಹಾಗೂ ಹೆರಿಗೆ ಕುರಿತು ಆಡಿರುವ ಮಾತು ಮತ್ತು ಹಾವಭಾವ ಸಹಿಸಲು ಸಾಧ್ಯವಿಲ್ಲ. ಹಿರಿಯ ಮುಖಂಡರಾಗಿ, ಸುಧೀರ್ಘ ಅವಧಿಗೆ ಅಧಿಕಾರ ನಡೆಸಿದ ಅನುಭವವುಳ್ಳ ದೇಶಪಾಂಡೆ ಅವರೇ ಇಂತಹ ವರ್ತನೆ ತೋರಿದರೆ, ಕಾಂಗ್ರೆಸ್ಸಿನ ಮರಿ ಪುಡಾರಿಗಳು ಇನ್ನು ಹೇಗೆ ವರ್ತಿಸಬಹುದು ಎಂದು ಪ್ರಶ್ನೆ ಮಾಡಿದ್ದಾರೆ. ಕಾಂಗ್ರೆಸ್ ಮಹಿಳೆಯರ ಬಗ್ಗೆ ಯಾವ ರೀತಿಯ ದೃಷ್ಟಿ ಕೋನ ಹೊಂದಿದೆ ಎಂಬುದು ಈ ಬೇಜವಾಬ್ದಾರಿಯ ಹೇಳಿಕೆಯಿಂದ ಸ್ಪಷ್ಟವಾಗಿದೆ ಎಂದು ನಿರ್ಮಲಾ ಕೊಳ್ಳಿ ಅವರು ಕಿಡಿಕಾರಿದ್ದಾರೆ.

ಹಲವುಬಾರಿ ಸಚಿವರಾಗಿ, ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿ, ಪ್ರಸ್ತುತ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿರುವ ಆರ್.ವಿ.ದೇಶಪಾಂಡೆ ಅವ-ರಿಗೆ ಖಂಡಿತವಾಗಿ ಇಂತಹ ಮಾತು ಶೋಭೆಯಲ್ಲ, ಅವರ ದರ್ಪ - ದೌಲತ್ತು ಏನಿದ್ದರೂ ಕೆಲಸದ ಮೂಲಕ ತೋ-ರಿಸಬೇಕಿತ್ತು, ಅವಮಾನಿಸಿ ಮಹಿಳಾ ಪತ್ರಕರ್ತರ ಬಾಯಿ ಮುಚ್ಚಿಸುವ ತಂತ್ರದಿಂದ ನಾಡಿನ ಸ್ತ್ರೀಕುಲಕ್ಕೆ ಬೇಸರವಾಗಿದೆ ಎಂದು ಶ್ರೀಮತಿ ನಿರ್ಮಲಾ ಕೊಳ್ಳಿ ತಿಳಿಸಿದ್ದಾರೆ.

ಕಾಂಗ್ರೆಸ್ಸಿನವರು ಮಾತೆತ್ತಿದರೆ ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಟಾಂ- ಟಾಂ ಮಾಡಿಕೊಂಡು ಊರೆಲ್ಲಾ ಓಡಾಡುತ್ತಾರೆ, ಆದರೆ ಮಹಿಳೆಯರ ಬಗ್ಗೆ ಹಾಗೂ ಮಾತೃತ್ವದ ಬಗ್ಗೆ ಗೌರವವೇ ಇಲ್ಲದವರಿಂದ ಸಮಾಜ ಯಾಕೆ ನಿರೀಕ್ಷೆ ಇಟ್ಟುಕೊಳ್ಳಬೇಕು ಇಂತಹ ಮಂತ್ರಿಗಳಿಂದ ಮಹಿಳಾ ಕುಲಕ್ಕೆ ಅವಮಾನ ಎಂದು ಕೂಡಲೇ ಸಚಿವ ಆರ್.ವಿ. ದೇಶಪಾಂಡೆ ಅವರು ಈ ಕುರಿತು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ.

# ಸಾಂಕ್ರಾಮಿಕ ರೋಗಗಳು ಬಾರದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 5 : ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಜಿಲ್ಲಾ ಕಣ್ಗಾವಲು ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಡೆಂಗ್ಯೂ, ಚುಕ್ಕುನ್ ಗುನ್ಯಾ ರೋಗಗಳ ಹರಡುವಿಕೆ ತಡೆಗಟ್ಟಲು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಚತೆಯ ಕುರಿತು ಅರಿವು ಮೂಡಿಸಬೇಕು ಎಂದರು.

ಗದಗ ಜಿಲ್ಲೆಯು ಕೂಡ ಕೆಎಫ್‌ಡಿ ಬಾಧಿತ ಎಂಡಮಿಕ್ ಜಿಲ್ಲೆಗಳಲ್ಲಿ ಒಂದಾಗಿದ್ದು, ಕೆಎಫ್‌ಡಿ ವೈರಸ್‌ನಿಂದ ಸೋಂಕಿತಗೊಂಡ ಉಣ್ಣೆಯು ಕಚ್ಚುವುದರಿಂದ ಹರಡುವ ವೈರಲ್ ಜ್ವರವಾಗಿದೆ. ಈ ಕಾಯಿಲೆಗೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲ. ರೋಗ ಬಾರದಂತೆ ಎಚ್ಚರಿಕೆ ವಹಿಸುವುದು ಅತ್ಯಂತ ಮುಖ್ಯವಾಗಿರುತ್ತದೆ. ಜಿಲ್ಲೆಯಿಂದ ಈಗಾಗಲೇ 76 ರಕ್ತದ ಮಾದರಿಗಳನ್ನು ಹಾಗೂ 26 ಟಿಕ್‌ಪೂಲ್ ಮಾದರಿಗಳನ್ನು ಕೆಎಫ್‌ಡಿ ವೈರಸ್ ಪತ್ತೆಗಾಗಿ ವಿಡಿಎಲ್ ಶಿವಮೊಗ್ಗ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗಿತ್ತು. ಎಲ್ಲ ರಕ್ತದ ಮಾದರಿಗಳು ಹಾಗೂ ಟಿಕ್‌ಪೂಲ್ ಮಾದ-ರಿಗಳ ಫಲಿತಾಂಶ ನೆಗೆಟಿವ್ ಎಂದು ವರದಿಯಾಗಿವೆ. 2024 ರಲ್ಲಿ 8 ಟಿಕ್‌ಪೂಲ್‌ಗಳನ್ನು ಕಳುಹಿಸಿದ್ದು ಎಲ್ಲವೂ ನೆಗೆಟಿವ್ ಎಂದು ವರದಿಯಾಗಿವೆ. ಇಲ್ಲಿಯವರೆಗೆ ಯಾವುದೇ ಮಂಗಗಳ ಸಾವಿನ ವರದಿಯಾಗಿರುವುದಿಲ್ಲ. ನವೆಂಬರ್ ತಿಂಗಳಿನಿಂದ ಜೂನ್ ತಿಂಗಳವರೆಗೂ ರೋಗ ಪ್ರಸರಣವಾಗುವ ಸಮಯವಿರುವುದರಿಂದ ತಾಲೂಕಾ ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ಕೆಎಫ್‌ಡಿ ಕುರಿತು ಸಭೆ ನಡೆಸುವುದು. ಕೆಎಫ್‌ಡಿ ನಿಯಂತ್ರಿಸಲು ವಿವಿಧ ಇಲಾಖೆಗಳ ಸಹಕಾರ ಅಗತ್ಯ. ವಿಶೇಷವಾಗಿ ಅರಣ್ಯ ಇಲಾಖೆ ಹಾಗೂ ಪಶು ಸಂಗೋಪನಾ ಇಲಾಖೆ ಮುಖ್ಯವಾಗಿರುತ್ತವೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾ ಸಮೀಕ್ಷಣಾಧಿಕಾರಿ ವೆಂಕಟೇಶ ರಾಠೋಡ ಮಾತನಾಡಿ ಜಿಲ್ಲೆಯಲ್ಲಿ ಜನೆವರಿ 2025 ರಿಂದ ಜುಲೈ 2025 ರವೆಗೆ ಒಟ್ಟು 2499 ಕರುಳು ಬೇನೆ ಪ್ರಕರಣಗಳು, 2064 ಟೈಫೈಡ್ ಪ್ರಕರಣಗಳು. 22 ಹೆಪಟೈಟೀಸ್ ಎ, 61 ಡೆಂಗೀ ಪ್ರಕರಣಗಳು ವರದಿಯಾಗಿವೆ. ಜನೆವರಿ 2025 ರಿಂದ ಜುಲೈ 2025 ರವರೆಗೆ ಒಟ್ಟು 206679 ಸಂಶಯಾಸ್ಪದ ಮಲೇರಿಯಾ ರಕ್ತದ ಲೇಪನಗಳನ್ನು ಸಂಗ್ರಹಿಸಿದ್ದು ಅದರಲ್ಲಿ 3 ಖಚಿತ ಪ್ರಕರಣಗಳು ವರದಿಯಾಗಿವೆ. ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನ್ಯತೆಗಳ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯಿಂದ ಪ್ರತಿ ತಿಂಗಳು 50 ಉಪ್ಪು ಮಾದರಿಗಳು ಹಾಗೂ 25 ಮೂತ್ರದ ಮಾದರಿಗಳನ್ನು ಸಂಗ್ರಹಿಸಿ ಅಯೋಡಿನ್ ಅಂಶದ ಪರೀಕ್ಷೆಗಾಗಿ ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗಿದೆ. ಇಲ್ಲಿಯವರೆಗೂ ಗದಗ ಜಿಲ್ಲೆಯಿಂದ 2025 ರಲ್ಲಿ ಒಟ್ಟು 351 ಉಪ್ಪಿನ ಮಾದರಿಗಳು ಹಾಗೂ 176ಮೂತ್ರದ ಮಾದರಿಗಳನ್ನು ಅಯೋಡಿನ್ ಪರೀಕ್ಷೆಗೆ ಕಳುಹಿಸಿ ಕೊಡಲಾಗಿತ್ತು. ಎಲ್ಲ ಮೂತ್ರದ ಮಾದರಿಗಳು ಸಹಜ ಎಂದು ವರದಿಯಾಗಿವೆ. ಅದರಲ್ಲಿ 3 ಉಪ್ಪಿನ ಮಾದರಿಗಳು< 15ಪಿಪಿಎಂ ಎಂದು ವರದಿಯಾಗಿವೆ ಎಂದು ಡಾ.ವೆಂಕಟೇಶ ರಾಠೋಡ ಸಭೆಗೆ ವಿವರಿಸಿದರು.

ಸಭೆಯಲ್ಲಿ ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ( SBPC), ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮ, ಇಲಿ ಜ್ವರ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ, ಡಾ.ಮೀನಾಕ್ಷಿ, ಡಾ. ಕ-ರಿಗೌಡ್ರ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ವೈ.ಕೆ.ಭಜಂತ್ರಿ, ಡಾ. ರಾಜೇಂದ್ರ ಬಸರಿಗಿಡದ, ಡಾ.ಅರುಂಧತಿ ಕುಲಕರ್ಣಿ ಸೇರಿದಂತೆ ತಾಲೂಕಾ ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು

### ಬಸವ ಯೋಗ ಮಹಾವಿದ್ಯಾಲಯದಲ್ಲಿ ಕ್ರೀಡಾ ದಿನಾಚರಣೆ

# ವ್ಯಕ್ತಿಯ ಶಕ್ತಿ, ಸಾಮರ್ಥ್ಯ ಹೆಚ್ಚಿಸಲು ಕ್ರೀಡೆಗಳು ಸಹಕಾರಿ

❑ ಸ್ನೇಹಜೀವಿ ನ್ಯೂಸ್



ಗದಗ, ಸೆ.5 : ವ್ಯಕ್ತಿಯಲ್ಲಿ ಮೂಲಭೂತವಾಗಿ ಹಲವಾರು ಶಕ್ತಿ, ಸಾಮರ್ಥ್ಯಗಳು ಹುದುಗಿರುತ್ತವೆ. ಅವುಗಳ ವೃದ್ಧಿಗೆ ಪರಿಸರ ಸಹಕಾರಿಯಾಗಿದ್ದರೂ ಕೂಡ ಅಭಿವ್ಯಕ್ತಿಗೆ ಅವಕಾಶ ಬಹು ವಿರಳ. ಆದರೆ ಕ್ರೀಡೆಗಳು ಅಭಿವ್ಯಕ್ತಿಗೆ ಹೆಚ್ಚಿನ ಅವಕಾಶ ನೀಡುತ್ತವೆ. ಈ ಅವಕಾಶ ಉಪಯೋಗಿಸಿಕೊಳ್ಳುವ ಅಭಿಲಾಷೆಯಿಂದ ವ್ಯಕ್ತಿ ಕ್ರೀಡಾ ಸಾಧನೆಗೆ ಮುನ್ನಡೆಯುವನು. ಇದರಿಂದ ಅವನಲ್ಲಿ ಶಕ್ತಿ ಸಾಮರ್ಥ್ಯಗಳು ಹೆಚ್ಚು ಬಲಗೊಳ್ಳುವವು. ಹೀಗಾಗಿ ವ್ಯಕ್ತಿಯ ಶಕ್ತಿ ಸಾಮರ್ಥ್ಯ ಹೆಚ್ಚಿಸಲು ಕ್ರೀಡೆಗಳು ಹೆಚ್ಚು ಸಹಕಾರಿಯಾಗಿವೆ ಎಂದು ವೈ.ಎಸ್. ಮತ್ತೂರ ಹೇಳಿದರು.

ಎಸ್.ವಾಯ್.ಬಿ.ಎಂ.ಎಸ್. ಯೋಗಪಾಠಶಾಲೆಯ ಬಸವ ಯೋಗ ಮಹಾವಿದ್ಯಾಲಯ ಸಿದ್ಧಲಿಂಗ ನಗರದ ಬಸವ ಯೋಗ ಮಂದಿರದಲ್ಲಿ ನಡೆಸಿದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಇಂದಿನ ದಿನಮಾನದಲ್ಲಿ ಯುವಕರು ಮತ್ತು ವಿದ್ಯಾರ್ಥಿಗಳಲ್ಲಿ ಕ್ರೀಡಾ ಆಸಕ್ತಿ ಕುಸಿಯುತ್ತಲಿದೆ. ಕಾರಣ ಹಲವಾರಿದ್ದರೂ ಪ್ರೋತ್ಸಾಹದ ಕೊರತೆ ಪ್ರಮುಖವಾಗಿದೆ. ಕ್ರೀಡೆ ಮತ್ತು ಕ್ರೀಡಾಪಟುಗಳಿಗೆ ಸರಕಾರ, ಸಮಾಜ ಬಾಂಧವರು ಹೆಚ್ಚಿನ ಪ್ರೋತ್ಸಾಹ ನೀಡಿದರೆ ಖಂಡಿತವಾಗಿಯೂ ಕ್ರೀಡಾ ಕ್ಷೇತ್ರ ಶ್ರೀಮಂತಗೊಳ್ಳುವದೆಂದು ಸಭಿಕರಿಗೆ ಚಿಂತನಪರ ವಿಚಾರ ಸೂಚಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಬಸವ ಯೋಗ ಮಹಾವಿದ್ಯಾಲಯದ ಪ್ರಾಚಾರ್ಯ ಕೆ. ಎಸ್. ಪಲ್ಲೇದ ಇವರು ಕ್ರೀಡೆಗಳು ನಾಡಿನ ಅಭಿವೃದ್ಧಿಗೆ ಸಂಪನ್ಮೂಲಗಳಾಗಿವೆ. ಅವುಗಳನ್ನು ಸದುಪಯೋಗ ಪಡಿಸಿಕೊಂಡರೆ ಸದೃಢ, ಸಂಪದ್ಭರಿತ ನಾಡು ನಮ್ಮದಾಗುವುದು. ಹಾಕಿ ಮಾಂತ್ರಿಕ ಧ್ಯಾನಚಂದರಂತಹ ಶ್ರೇಷ್ಠ ಕ್ರೀಡಾಪಟುಗಳು ನಮ್ಮ ದೇಶದ ಘನತೆ, ಗೌರಗಳನ್ನು ಹೆಚ್ಚಿಸಿರುವರು. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಶ್ರೇಷ್ಠ ಕ್ರೀಡಾಪಟುಗಳ ನಿರ್ಮಾಣ ಕಾರ್ಯ ಎಲ್ಲೆಡೆ ನಡೆದರೆ ಕ್ರೀಡಾ ದಿನಾಚರಣೆ ಸಾರ್ಥಗೊಳ್ಳುವದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶೇಷವಾಗಿ 2024-25 ನೇ ಸಾಲಿನ ಪಿ.ಜಿ.ಡಿಪ್ಲೋಮಾ ಇನ್ ಯೋಗ ಸ್ಟಡೀಜ್ ಕೋರ್ಸ್ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಜರುಗಿತು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಯೋಗ ಕ್ರೀಡಾಪಡು ಅಕ್ಷತಾ ಕೊಣ್ಣೂರ ಇವರನ್ನು ಸನ್ಮಾನಿಸಲಾಯಿತು. ಅನಿಲಕುಮಾರ ಎಸ್. ಬಿ., ಗೀತಾ ಪೂಜಾರ, ವಿದ್ಯಾ ಮುಳ್ಳಾಳ ಇವರು ಯೋಗ ಕೋರ್ಸ್ ಮತ್ತು ಯೋಗ ಕಾಲೇಜಿನ ಪರಿಶ್ರಮ ಕುರಿತು ತಮ್ಮ ಅನಿಸಿಕೆ ತಿಳಿಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಡಿ. ಸಿ. ಪಾವಟೆ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್. ಪಿ. ಗೌಳಿ, ಉಪನ್ಯಾಸಕಿ ಕಲಾವತಿ ಸಂಕನಗೌಡ್ರ, ಗುರುಬಸವ ಸಿ.ಬಿ.ಎಸ್.ಇ. ಶಾಲೆ ಸಂಗೀತ ಶಿಕ್ಷಕಿ ಸುನಂದಾ ಜ್ಯಾನೋಪಂತರ ಸಮಯೋಚಿತವಾಗಿ ಕ್ರೀಡೆಗಳಲ್ಲಿ ಸಾಧನೆ ಮಾಡಿದವರ, ಕ್ರೀಡಾಪಟುಗಳ ಜೀವನದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ವೃಂದದವರು ಪಾಲ್ಗೊಂಡಿದ್ದರು. ಸಪ್ನಾ ಹಿರೇಮಠ ಮತ್ತು ಸಂಗಡಿಗರು ಪ್ರಾರ್ಥಿಸಿದರು ಹೊನಕೇರಪ್ಪ ಮೇಟಿ ಸ್ವಾಗತ ಕೋರಿದರು. ನಿಂಬವ್ವಾ ತೇಲಸಂಗ ವಂದನಾರ್ಪಣೆ ಮಾಡಿದರು. ಅಶೋಕ ಬಾರಕೇರ ನಿರೂಪಿಸಿದರು.

# ವಿಮಾ ಸಪ್ತಾಹ ಸಮಾರೋಪ ಸಮಾರಂಭ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ.5 : ಭಾರತದಲ್ಲಿ ಅತೀ ದೊಡ್ಡ ವಿಮಾ ನಿಗಮವು ತನ್ನ 69ನೇ ಫೌಂಡೇಶನ್ ವಿಮಾ ಸಪ್ತಾಹವು ಪ್ರಾರಂಭೋತ್ಸವದ ಅಂಗವಾಗಿ ಗದುಗಿನ ಎಲ್ ಐ ಸಿ ಶಾಖೆ 1ರಲ್ಲಿ ವಿವಿಧ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿತ್ತು.

ಬೇರೆ ಬೇರೆ ಶಾಲೆಯ ಮಕ್ಕಳ ರಂಗೋಲಿ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಪ್ರತಿನಿಧಿಗಳಿಗೆ, ಹಾಡಿನ ಬಂಡಿ ಕ್ವಿಜ್ ಮತ್ತು ವಿಮಾ ನೌಕರ-ರಿಗೆ ವಿವಿಧ ಸ್ಪರ್ಧೆಗಳು ಏರ್ಪಡಿಸಿದ್ದು ವಿಶೇಷವಾಗಿತ್ತು ಸಮಾರೋಪ ಸಮಾರಂಭವು ಚಿಪ್ ಮ್ಯಾನೇಜರ್ ಎಚ್. ಎಮ್. ಭಜಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಂಗಳಾ ತಾಪಸ್ಕರ ಆಗಮಿಸಿದ್ದರು. ಆನಂದ್ ಜಿ ಕೆ. ಉಪಸ್ಥಿತರಿದ್ದರು ಮತ್ತು ಎಲ್ಲಾ ವಿಮಾ ನೌಕರ ಬಳಗ ಪ್ರತಿನಿಧಿ ಬಳಗ ಮುಖ್ಯವಾಗಿ ಪಾರಿತೋಷಕ ಪಡೆದ ಮಕ್ಕಳ ಪಾಲಕರು ಆಗಮಿಸಿದ್ದು ವಿಶೇಷವಾಗಿತ್ತು. ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಎಲ್ಲರಿಗೂ ಪ್ರಶಸ್ತಿ ವಿತರಣೆ ಮಾಡಲಾಯಿತು ಹಾಗೆಯೇ ಇದರಲ್ಲಿ ವಿಶೇಷವಾಗಿ ಮಹಾವೀರ ಜೈನ ಶಾಲೆಯ 4ನೇ ತರಗತಿಯ ವಿದ್ಯಾರ್ಥಿನಿ ಕುಮಾರಿ ರೋಷನಿ ಸೋಮಪ್ಪ ನಾಯಕ ಚಿತ್ರಕಲೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ ಮತ್ತು ಶಾಲೆಯ ಮುಖ್ಯ ಗುರುಗಳಾದ ಚಂದ್ರಕಾಂತ್ ಕಬಾಡಿ ಮತ್ತು ಶೈಲಜಾ ಧರ್ಮಶಿ ಅವರನ್ನು ಅಭಿನಂದಿಸಲಾಯಿತು.

ಜೆ.ಎಸ್.ತಳವಾರ ವಿಮಾ ಅಧಿಕಾರಿ ಕಾರ್ಯಕ್ರಮ ಯಶಸ್ವಿಗೆ ಮಾರ್ಗದರ್ಶನ ಮಾಡಿದರು ಎಂದು ಸೋಮು ಲಮಾಣಿ ತಿಳಿಸಿದ್ದಾರೆ.

### ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ : ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ-ನಿವೃತ್ತರಿಗೆ ಸನ್ಮಾನ

# ಡಾ. ರಾಧಾಕೃಷ್ಣನ್‌ರವರ ಶಿಸ್ತು, ಶ್ರದ್ಧೆ ನಮಗೆಲ್ಲ ಮಾದರಿ




❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 5 : ತತ್ವಜ್ಞಾನಿ, ಶ್ರೇಷ್ಠ ಶಿಕ್ಷಕ, ರಾಷ್ಟಪತಿಯಾಗಿ ಡಾ. ರಾಧಾಕೃಷ್ಣನ್‌ರವರ ಶಿಸ್ತು, ಶ್ರದ್ಧೆ ನಮಗೆಲ್ಲ ಮಾದರಿಯಾಗಿದೆ ಎಂದು ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಅವರ ಶಿಸ್ತು ಶ್ರದ್ದೆಯಿಂದ ಕಾರ್ಯ ನಿರ್ವಹಿಸಿ, ಉನ್ನತಮಟ್ಟ ತಲುಪಿದರು. ಅವರಂತೆ ನಾವೆಲ್ಲರೂ ಸಹ ಶ್ರದ್ಧೆ ಪ್ರಾಮಾಣಿಕತೆ ಜೀವನದಲ್ಲಿ ಅಳವಡಿಸಿಕೊಂಡು ಮುಂದೆ ಸಾಗಬೇಕು ಎಂದರು.

ಬಹಳ ಶಿಕ್ಷಕರು ಸ್ಪರ್ಧಾತ್ಮಕ ಪರೀಕ್ಷೆ ಬರೆದು, ಉನ್ನತ ಹುದ್ದೆ ಅಲಂಕರಿಸಿ ಸಮಾಜ ಸೇವೆ ಮಾಡುತ್ತಿದ್ದಾರೆ. ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಮಾಡ್ತಿದ್ದೇವೆ. ರಾಧಾಕೃಷ್ಣನ್‌ರವರ ಅವರಿಗೆ ಶಿಕ್ಷಕರ ಮೇಲೆ ಅಪಾರ ಪ್ರೀತಿ ಗೌರವ ಇದ್ದುದರಿಂದ ತಮ್ಮ ದಿನಾಚರಣೆ ಶಿಕ್ಷಕರ ದಿನಾಚರಣೆಯಾಗಿ ಆಚರಣೆ ಮಾಡಲು ತಿಳಿಸಿದರು ಎಂದರು.

ಕರ್ನಾಟಕ ಖನಿಜ ಅಬಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ಒಬ್ಬ ಶ್ರೇಷ್ಠ ತತ್ವಜ್ಞಾನಿ, ರಾಷ್ಟಪತಿ ಡಾ. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಅದ್ದೂರಿಯಾಗಿ ಶಿಕ್ಷಕರ ದಿನಾಚರಣೆಯಾಗಿ ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ಗದಗ ಜಿಲ್ಲೆ ಶೈಕ್ಷಣಿಕ ಪ್ರಗತಿಗೆ ಒತ್ತು ಕೊಡುವ ಜಿಲ್ಲೆಯಾಗಿದೆ. ಆದ-'ರೂ ಫಲಿತಾಂಶ ಸುದಾರಣೆ ಅಷ್ಟೇನು ಸಮಾದಾನಕರವಿಲ್ಲ. ಇನ್ನು ಮುಂದಾದರೂ ಸಹ ಇನ್ನಷ್ಟು ಫಲಿತಾಂಶ ಸುದಾರಣೆಗೆ ಶ್ರಮಿಸೋಣ ಎಂದರು.

ಕೆಂದ್ರದಂತೆ, ರಾಜ್ಯ ಶಿಕ್ಷಣ ನೀತಿಯಲ್ಲಿ ಅಷ್ಟೇನು ಬದಲಾವಣೆ ಇರದು, ಮಕ್ಕಳ ಶಿಕ್ಷಣಕ್ಕೆ ರಾಜ್ಯ ಶಿಕ್ಷಣ ನೀತಿ ಸಹ ಹೆಚ್ಚು ಸಹಕಾರಿಯಾಗಲಿದೆ ಎಂದರು. ಈ ವರ್ಷ ಪಬ್ಲಿಕ್ ಶಾಲೆ ಆರಂಬಕ್ಕೆ ಆರ್ಥಿಕ ಇಲಾಖೆ ಅನುಮೋದನೆ ಪಡೆದಿದೆ. ಶಿಘ್ರದಲ್ಲೆ ಇನ್ನಷ್ಟು ಪಬ್ಲಿಕ್ ಶಾಲೆ ಆರಂಬಿಸಲು ಕ್ರಮ ವಹಿಸಲಾಗುವುದು. ಅಲ್ಲದೇ ಶಿಕ್ಷಕರ ನೇಮಕಕ್ಕೂ ಶ್ರಮಿಸಲಾಗುತ್ತಿದೆ. ಒಟ್ಟಾರೆ ಶಿಕ್ಷಣ ಕ್ಷೇತ್ರದ ಅಭಿರುದ್ಧಿಗೆ ನಮ್ಮ ಸರ್ಕಾರದ ಆಧ್ಯತೆ ನೀಡಿದೆ ಎಂದು ಜಿ ಎಸ್ ಪಾಟೀಲ ತಿಳಿಸಿದರು.

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಅವರು ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ದೇಶದಲ್ಲಿ ಉನ್ನತಮಟ್ಟದ ಗೌರವಯುತ ಹುದ್ದೆ ಎಂದರೆ ಅದು ಶಿಕ್ಷಕ. ಜೀವನದಲ್ಲಿ ಶಿಕ್ಷಕ ಪಾತ್ರ ಬಹುದೊಡ್ಡದಾಗಿದೆ. ಶಾಲಾ ಶಿಕ್ಷಕ ವರ್ಗಾವಣೆ ಆದಾಗ ಆ ಶಾಲೆ ಮಕ್ಕಳು ಗ್ರಾಮಸ್ಥರು ವರ್ಗಾವಣೆ ಆಗಿರುವ ಶಿಕ್ಷರನ್ನು ಬಿಳ್ಕೊಡಲು ಒಪ್ಪುವದಿಲ್ಲ. ಅನಿವಾರ್ಯವಾಗಿ ಕಳಿಸುತ್ತಾರೆ. ಇಂತಹ ಅನೇಕ ಉತ್ತಮ ಶಿಕ್ಷಕರನ್ನು ನಾವಿಂದು ಸಮಾಜದಲ್ಲಿ ಕಾಣುತ್ತೇವೆ ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಮಾತನಾಡಿ, ದೇಶದ ಉಪರಾಷ್ಟಪತಿಗಳಾಗಿ, ರಾಷ್ಟಪತಿಯಾಗಿ ಅಪಾರ ಸೇವೆ ಸಲ್ಲಿಸಿದವರು ಡಾ. ರಾಧಾಕೃಷ್ಣನ್ ಅವರು. ರಾಧಾಕೃಷ್ಣನ್ ಅವರು ದೇಶಕ್ಕೆ ಹಾಗೂ ಶಿಕ್ಷಕ ಸಮುದಾಯಕ್ಕೇ ತಮ್ಮದೇ ಆದ ಅಪಾರ ಕೊಡುಗೆ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಸಾಗೋಣ ಎಂದರು. ಜಿಲ್ಲೆಯಲ್ಲಿ ರಾಜ್ಯ ಪುರಸ್ಕೃತ ಶಿಕ್ಷಕ ಬಿ ಜಿ ಅಣ್ಣಿಗೇರಿ ಅವರು ಸಹ ಉತ್ತಮ ಶಿಕ್ಷಕರಾಗಿದ್ದರು ಅವರ ಹೆಸರನ್ನು ಒಂದು ಉಧ್ಯಾನವನಕ್ಕೆ ಬಿ ಜಿ ಅಣ್ಣಿಗೇರಿ ಎಂದು ನಾಮಕರಣ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿಂದೆ ಗುರು ಇರಬೇಕು ಮುಂದೆ ಗುರಿ ಇರಬೇಕು. ಆಗಮಾತ್ರ ಗುರಿ ಸಾಧನೆ ಸಾದ್ಯಮಾಗುತ್ತದೆ. ಇಂದು ನಾವೆಲ್ಲ ಇಲ್ಲಿಬಂದು ಸೇರಬೇಕಾದರೇ ಅದಕ್ಕೆ ಶಿಕ್ಷಕರು ಕಾರಣ. ಶಿಕ್ಷಕರು ಇಲ್ಲದ ಸಮಾಜ ಪರಿಪೂರ್ಣ ಆಗಲಾರದು. ಹಿಂದೆ ಮಠಮಾನ್ಯಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಗುರುಕುಲ ಪದ್ದತಿ ಇತ್ತು. ಇಂದು ನಾವು ಅವುಗಳನ್ನು ಕಾಣಬಹುದು ಎಂದರು.

ಇಂದಿನ ಮಕ್ಕಳು ಜನರೇಶನ್ ಅಲ್ಪಾ, ಬೀಟಾ ಮಕ್ಕಳಾಗಿದ್ದಾರೆ. ಮಕ್ಕಳದ್ದು ಮುದ್ರಣ-ರಹಿತ ಅಭ್ಯಸ ಆಗಿದೆ. ಇದಕ್ಕಾಗಿ ನಾವುಸಹ ಆದುನಿಕತೆಗೆ ಹೊಂದಿಕೊಳ್ಳಬೇಕು. ಇಂದಿನ ಮಕ್ಕಳು ಟೀನೆಜರ್ಸ್ ಅಲ್ಲ ಮೊಬೈಲ್ ಸ್ಕೀನಿರ್ ಮಕ್ಕಳಾಗಿರುತ್ತಾರೆ.

ಇಂದಿನ ಮಕ್ಕಳಿಗೆ ಒದುವುದು ಎಂದರೆ, ಕೆಳಿಸಿಕೊಳ್ಳುವುದು. ಬರೆಯುವದು ಎಂದರೆ, ಹೇಳುವುದಾಗಿದೆ. ಇದಕ್ಕೆ ನಾವು ಬದಲಾಗಿ ಮಕ್ಕಳಿಗೆ ಕಲಿಸುವ ಹೊಣೆಗಾರಿಕೆ ನಮ್ಮದಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಆಡಳಿತ) ಆರ್.ಎಸ್.ಬುರಡಿ, ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ಒಬ್ಬ ಒಳ್ಳೆ ಶಿಕ್ಷಕನಾದವರು ಮೊದಲು ತಮ್ಮನ್ನು ತಾವು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಶಿಕ್ಷಕರಾದವರು ತಮ್ಮ ಕರ್ತವ್ಯ, ಜವಾಬ್ದಾ-ರಿಗಳನ್ನು ಅರಿತು ಪ್ರಮಾಣಿಕವಾಗಿ ಮಾಡಬೇಕು ಎಂದರು. ಶಿಕ್ಷಕ ನಿರಂತರ ಅಧ್ಯಯನ ಶೀಲರಾಗಿರಬೇಕು, ಅದನ್ನು ಮಕ್ಕಳಿಗೆ ಕಲಿಸುವ ರೂಡಿ ಮಾಡಿಕೊಳ್ಳಬೇಕು ಎಂದರು. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರಿಗೆ ಶಿಕ್ಷಕರ ಮೇಲಿನ ಪ್ರೀತಿ ಅಭಿಮಾನದಿಂದಾಗಿ ತಮ್ಮ ಜನ್ಮದಿನಾಚರಣೆಯನ್ನು ಶಿಕ್ಷಕರ ದಿನವನ್ನಾಗಿ ಆಚರಿಸಿ ಎಂದರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಎಸ್ ಎನ್ ಬಳ್ಳಾರಿ, ಎಡಿಸಿ ಡಾ. ದುರಗೇಶ್ ಕೆ ಆರ್, ಜಿಪಂ ಉಪಕಾರ್ಯರ್ಶಿ ಸಿ ಆರ್ ಮುಂಡರಗಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಡಯಟ್‌ದ ಉಪನಿರ್ದೇಶಕರಾದ (ಅಭಿವೃದ್ಧಿ) ಮಂಗಳಾ ತಾಪಸ್ಕರ್, ಗದಗ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಯ್ಯ ಸಿ ಕೊರವನವರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ.ಮಸನಾಯಕ, ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ, ಗದಗ ತಹಶೀಲ್ದಾರರಾದ ಶ್ರೀನಿವಾಸ ಮೂರ್ತಿ ಕುಲಕರ್ಣಿ, ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ.ಶೆಟ್ಟೆಪ್ಪನವರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾ-ರಿಗಳು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು, ವಿವಿಧ ಶಿಕ್ಷಕರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

# ನಾಗಾವಿ ಗ್ರಾಮದಲ್ಲಿ ಪುಟ್ಟರಾಜ ಕವಿ ಗವಾಯಿಗಳವರ ಪುಣ್ಯಸ್ಮರಣೆ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ.5 : ನಡೆದಾಡುವ ದೇವರೆಂದೇ ಖ್ಯಾತಿ ಹೊಂದಿರುವ ಲಿಂ.ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳು ಅಂಧ, ಅನಾಥರ ಬಾಳಿಗೆ ಬೆಳಕಾಗಿದ್ದರು. ಅವರಿಂದ ಸಂಗೀತ ಕಲಿತ ಲಕ್ಷಾಂತರ ಕಲಾವಿದರು ವಿಶ್ವದೆಲ್ಲೆಡೆ ಸೇವೆ ಸಲ್ಲಿಸುತ್ತಿದ್ದಾರೆ. ಮಾನವರಾಗಿ ಜನಿಸಿದ್ದರೂ ಕೂಡಾ ತಮ್ಮ ಸತ್ಕಾರ್ಯಗಳ ಮೂಲಕ ದೇವರಾದರು ಎಂದು ಬಳಗಾನೂರು ಚಿಕೇನಕೊಪ್ಪ ಮಠದ ಶಿವಶಾಂತವೀರ ಶರಣರು ಹೇಳಿದರು.

ತಾಲೂಕಿನ ನಾಗಾವಿ ಗ್ರಾಮದ ಬಸವೇಶ್ವರ ಭಜನಾ ಸಂಘದ ವತಿಯಿಂದ ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳವರ 15ನೇ ಪುಣ್ಯಸ್ಮರಣೆ ಆಚರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪುಟ್ಟರಾಜ ಕವಿ ಗವಾಯಿಗಳವರ ಸಂಗೀತ, ಸಾಹಿತ್ಯ ಸೇವೆಗಾಗಿ ವಿವಿಧ ಸಂಘಟನೆಗಳಿಂದ ವಿವಿಧ ಪ್ರಶಸ್ತಿಗಳೂ ಸೇರಿದಂತೆ ಸರಕಾರದಿಂದ ಪದ್ಮ ಪ್ರಶಸ್ತಿ ಪಡೆದಿದ್ದಾರೆ. ಅವರ ಪುಣ್ಯಸ್ಮರಣೆಯನ್ನು ದೇಶಾದ್ಯಂತ ಆಚರಿಸುತ್ತಿರುವುದು ಅವರ ಘನತೆಯನ್ನು ತೋರುತ್ತದೆ ಎಂದು ಶ್ರೀಗಳು ಹೇಳಿದರು.

ಇದೇ ಸಂದರ್ಭದಲ್ಲಿ ನಾಗಾವಿ ನಾನಾ ಯೂಟ್ಯೂಬ್ ಮುಖಾಂತರ ಹೊರ ತಂದಿರುವ ಶರಣರ ಸಂದೇಶ ಕಾರ್ಯಕ್ರಮಕ್ಕೆ ವೀಕ್ಷಕರ ಆಹ್ವಾನಪತ್ರಿಕೆ ಬಿಡುಗಡೆ ಮಾಡುವುದರೊಂದಿಗೆ ಪ್ರಥಮ ಸಂಚಿಕೆಗೆ ಚಾಲನೆ ನೀಡಿದರು. ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಬಿ.ಎಸ್. ಚಿಂಚಲಿ ಪ್ರಾಸ್ತಾವಿಕವಾಗಿ ಮತನಾಡಿ, ಸ್ವಾಗತಿಸಿದರು.

ನಾಗಾವಿ ಗ್ರಾಮದ ಗಂಗಾಧರೇಶ್ವರ ಮಠದ ವೇದಮೂರ್ತಿ ಮೃತ್ಯುಂಜಯ ಸ್ವಾಮೀಜಿ ಹಿರೇಮಠ ಸಮ್ಮುಖ ವಹಿಸಿದರು. ಎಸ್.ಬಿ. ಹುಬ್ಬಳ್ಳಿ, ಸಿ.ವಿ. ಮಡಿವಾಳರ, ಜಿ.ಪಿ. ಹೊಂಬಳ, ಅಳಗವಾಡಿಯ ಗುರಪ್ಪ ಅವರಾದಿ ಸೇರಿದಂತೆ ಗ್ರಾಮದ ಪ್ರಮುಖರು, ಗಣ್ಯರು ಪಾಲ್ಗೊಂಡಿದ್ದರು.

ಬಸವರಾಜ ಎಸ್. ಹೊಂಬಳ ಪ್ರಾರ್ಥಿಸಿದರು. ಮಲ್ಲಪ್ಪ ಗೋಲಪ್ಪನವರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಬಸವೇಶ್ವರ ಭಜನಾ ಸಂಘದವರು ಮುಂಜಾನೆ ಪುಟ್ಟರಾಜ ಗವಾಯಿಗಳವರ ಭಾವಚಿತ್ರದೊಂದಿಗೆ ಭಜನೆ ಗೀತೆಗಳನ್ನು ಹಾಡುತ್ತ ಪ್ರಮುಖ ಬೀದಿಗಳಲ್ಲಿ ಸಂಚ-ರಿಸಿದರು. ಮಧ್ಯಾಹ್ನ ಅನ್ನದಾಸೋಹ ನಡೆಯಿತು. ಬಳಿಕ ಅಹೋರಾತ್ರಿ ಭಜನಾ ಕಾರ್ಯಕ್ರಮ ಅತ್ಯಂತ ಶ್ರದ್ಧಾ ಭಕ್ತಿಯಿಂದ ಜರುಗಿತು. ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಆಸಕ್ತಿಯಿಂದ ಭಾಗವಹಿಸಿದ್ದರು.

## ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 5 : ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜ0ಯಂತಿ0ಯನ್ನು ಸೆ. 7 ರಂದು ಸಂಜೆ 4 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಆಚರಿಸಲಾಗುವುದು.

# ಅರ್ಥಪೂರ್ಣ ಬದುಕಿನಿಂದ ಇಹಪರದಲ್ಲಿ ಸನ್ಮಂಗಲ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 5 : ಮನಸ್ಸಿನ ಕಲ್ಮಶಗಳನ್ನು ಕ್ಷೀಣಗೊಳಿಸಿ ಉನ್ನತಿಗೊಯ್ಯುವುದೇ ದಶಲಕ್ಷಣಪರ್ವ ಹಬ್ಬದ ಆಚರಣೆಯ ಉದ್ದೇಶವಾಗಿದ್ದು, ಇದು ಆಧ್ಯಾತ್ಮಿಕ ಸಾಧನೆಯ ಜೊತೆಗೆ ಉತ್ಕೃಷ್ಟ ಆದರ್ಶಮಯ ದೈನಂದಿನ ಬದುಕಿಗೂ ಸಂಜೀವಿನಿಯಾಗಿದೆ ಎಂದು ಶ್ರೀಮತಿ ಜ್ವಾಲಾಮಾಲಿನಿ ಮಹಾವೀರ ಸದರಣ್ಣವರ ಹೇಳಿದರು. ಅವರು ಗದಗ ಜಿಲ್ಲಾ ದಿಗಂಬರ ಜೈನ ಸಂಘವು 'ದಶಲಕ್ಷಣ ಪರ್ವಾಚರಣೆ ಮತ್ತು ಸಮಾಜ ಸಂಪರ್ಕ ಸಭೆ' ಕಾರ್ಯಕ್ರಮದ ನಿಮಿತ್ತ ಹುಯಿಲಗೋಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 'ಉತ್ತಮ ಆರ್ಜವ ಧರ್ಮ' ಕುರಿತು ಉಪನ್ಯಾಸ ಮಾಡುತ್ತ, ಕುಟಿಲತೆ, ಕಪಟತೆ, ಮಾಯಾಚಾರ ವ್ಯಕ್ತಿತ್ವದ ಸರ್ವನಾಶಕ್ಕೆ ಕಾರಣವಾಗಿದ್ದು, ಭೌತಿಕ ಮತ್ತು ಬೌದ್ಧಿಕವಾಗಿ ಉತ್ತಮವಾಗಿ ಬದುಕುವುದೇ ನಿಜವಾದ ಆರ್ಜವ ಧರ್ಮವಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಜೈನ ಸಮಾಜದ ಅಧ್ಯಕ್ಷ ರಮೇಶ ಬೆಳಗಟ್ಟಿ ಅವರು ಮನ-ವಚನ-ಕಾಯದಲ್ಲಿ ಏಕತೆ ಸಾಧಿಸಿ ಬದುಕನ್ನು ಪರಿಶುದ್ಧವಾಗಿ ಕಟ್ಟಿಕೊಂಡು ಅರ್ಥಪೂರ್ಣವಾಗಿ ಬದುಕುವವರು ಇಹಪರದಲ್ಲಿ ಸನ್ಮಂಗಲಕ್ಕೆ ಪಾತ್ರರಾಗುತ್ತಾರೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಪಿ.ಎ. ಕುಲಕರ್ಣಿ, ಎ.ಎನ್. ಬಸ್ತಿ, ಸುಭಾಸ ಅಂಗಡಿ, ಅರಹಂತ ದುಂಡಣ್ಣನವರ, ರಾಮಪ್ಪ ಎಲಿಗಾರ, ನಿಂಗಪ್ಪ ಬನ್ನಿಕೊಪ್ಪ, ಸೋಮಪ್ಪ ಬನ್ನಿಕೊಪ್ಪ, ಭೀಮಸಿ ಕುಸುಗಲ್ಲ, ನೇಸರಕುಮಾರ ಬೆಳಗಟ್ಟಿ, ಶಿವರಾಯಪ್ಪ ಬೆಳಗಟ್ಟಿ, ಸಂಕಪ್ಪ ಬೆಟದೂರ, ಯಲ್ಲಪ್ಪ ಹೊಸೂರ ಮತ್ತು ಸ್ಥಳೀಯ ಶ್ರಾವಕ-ಶ್ರಾವಿಕೆಯರು ಉಪಸ್ಥಿತ-ರಿದ್ದರು. ಯಶವಂತ ಸಿದ್ದಣ್ಣವರ ನಿರೂಪಿಸಿದರು.

# ಬೆಟಗೇರಿಯ ಪಾರಂಪರಿಕ ಸೀರೆಗಳ ಫ್ಯಾಷನ್ ಶೋ





❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 5 : ಪಾಲಾ ಬದಾಮಿ ರೋಡ, ಬೆಟಗೇರಿಯಲ್ಲಿರುವ ಶ್ರೀ ವಿದ್ಯಾರಣ್ಯ ಯುವಕ ಸಂಘದಿಂದ 1976 ಇಸ್ವಿಯಲ್ಲಿ ಸ್ಥಾಪನೆಗೊಂಡು ಶ್ರೀ ಗಜಾನನೋತ್ಸವದ ಸುವರ್ಣ ಮಹೋತ್ಸವದ ಅಂಗವಾಗಿ ವಿದ್ಯಾರಣ್ಯ ಯುವಕ ಸಂಘ, ಗದಗ ವೀವರ್ಸ ಪ್ರೊಡ್ಯುಸರ್ಸ್ ಕಂಪನಿ, ಗೌರಿಶಂಕರ ಮಹಿಳಾ ವಿವಿಧೋದ್ದೇಶಗಳ ಸಂಘದ ಸಹಯೋಗದಲ್ಲಿ ಹಾಗೂ ಬಿ.ಬಿ.ಬಣ್ಣದ ಕೈ ಮಗ್ಗ ನೇಕಾರರ ಅಭಿವೃದ್ಧಿ ಸಹಕಾರಿ ಸಂಘ, ಕೃತಪುರ ನೇಕಾರರ ಪತ್ತಿನ ಸಹಕಾರ ಸಹಕಾರ ಸಂಘ ನಿಯಮಿತ, ಶ್ರೀ ಸಚ್ಚಿದಾನಂದ ಹ್ಯಾಂಡಲೂಮ್ ವರ್ಕ್ಸ, ಸಿರಿ ಸಿಲ್ಕ & ಸಾರೀಸ್, ಮಹದೇವ ಡ್ರೇಸ್ಸಸ್, ಶ್ರೀ ನೀಲಕಂಠೇಶ್ವರ ಎಚ್.ಎಲ್ & ಪಿ.ಎಲ್ ವರ್ಕ್ಸ, ಅರವಿಂದ ಹ್ಯಾಂಡಲೂಮ್ ಸಾರೀಸ್ ಹಾಗೂ ವರುಣ ಎಂಟರಪ್ರೈಸಸ್ ಪ್ರಯೋಜ-ಕತ್ವದಲ್ಲಿ ಮಹಿಳೆಯರಿಂದ (ಬೆಟಗೇರಿಯಲ್ಲಿ ನೇಯ್ದಿರುವ ಸೀರೆಗಳಿಂದ) ಪಾರಂಪರಿಕ ಸೀರೆಗಳ ಫ್ಯಾಷನ್ ಶೋ ಜರುಗಿತು.

ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಅಶೋಕ ಬಣ್ಣದ ಮಾತನಾಡಿ, ಬೆಟಗೇ-ರಿಯಲ್ಲಿ ವಿಧ-ವಿಧವಾದ ಪಾರಂಪರಿಕೆ ಸೀರೆಗಳನ್ನು ನೂರಾರು ವರ್ಷಗಳಿಂದ ಕೈ ಮಗ್ಗ & ಪಾವರಲೋಮ್ ಮೂಲಕ ತಯರಿಸುತ್ತಿದ್ದು, ತಯಾರಾದ ಎಲ್ಲ ರೀತಿಯ ಸೀರೆಗಳನ್ನು ಉದ್ಯಮಿಗಳು ಖರೀದಿಸಿ ಕರ್ನಾಟಕ ರಾಜ್ಯಾದ್ಯಾಂತ ಮಾರಾಟ ಮಾಡುತ್ತಿದ್ದಾರೆ. ಆದರೆ ಬೆಟಗೇರಿಯಲ್ಲಿ ತಯಾರಾಗಿವೆಂದು ಕೆಲವರಿಗೆ ಮಾತ್ರ ಗೊತ್ತಿತ್ತು, ಇಂದು ಶ್ರೀ ಗಜಾನನೋತ್ಸವದ 50ನೇ ವರ್ಷದ ಸುವರ್ಣ ಮಹೋತ್ಸವದ ಅಂಗವಾಗಿ ಬೆಟಗೇರಿಯಲ್ಲಿ ನೇಯ್ದಿರುವ 30ಕ್ಕೂ ಹೆಚ್ಚು ವಿವಿಧ ಬಗೆಯ ಪಾರಂಪರಿಕ ಸೀರೆಗಳನ್ನು ಮಹಿಳೆಯರು ಉಟ್ಟುಕೊಂಡು ಫ್ಯಾಷನ್ ಶೋ ಮೂಲಕ ಬೆಟಗೇರಿಯಲ್ಲಿ ಪ್ರದರ್ಶನ ಮಾಡಿದ್ದು ಕರ್ನಾಟಕದಲ್ಲಿಯೇ ಪ್ರಪ್ರಥಮವಾಗಿ ನಡೆದದ್ದು ಎಂದರು.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ (ಮಹಿಳಾ ವಿಭಾಗ) ಬೆಂಗಳೂರ ಹಾಗೂ ಬಾಗಲಕೋಟೆಯ ವಚನ ವೈಭವ ಮಹಿಳಾ ಜಾನಪದ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ಡಿ.ಗೌಡರ ನೇಕಾರಿಕೆಯಲ್ಲಿ ನಾರಿಯರ ಶಕ್ತಿ ಅತ್ಯಂತ ಪ್ರಮುಖವಾಗಿದೆ.

ಈ ಭಾಗದಲ್ಲಿ ನೇಯ್ದಿರುವ ಸೀರೆಗಳಿಗೆ ಬೆಲೆ ಬಂದು ಎಲ್ಲ ಬಗೆಯ ಸೀರೆಗಳು ಮಾರುಕಟ್ಟೆಯಲ್ಲಿ ಹೆಚ್ಚಿನ ರೀತಿಯಲ್ಲಿ ಮಾರಾಟವಾಗಿ ನೇಕಾರರಿಗೆ ಬೆನ್ನೆಲುಬಾಗಿ ನಿಲ್ಲಲು ಮಹಿಳೆಯರೆಲ್ಲರೂ ಒಗ್ಗಟ್ಟಾಗಬೇಕೆಂದು ಹೇಳಿ, ಪಾರಂಪರಿಕ ಸೀರೆಗಳನ್ನು ಫ್ಯಾಷನ್ ಶೋ ಮೂಲಕ ಮಹಿಳೆಯರಿಂದ ಪ್ರದರ್ಶನ ಮಾಡಿಸಿದ್ದು ವಿನೂತನ ಹಾಗೂ ವಿಶಿಷ್ಟವಾಗಿದೆ. ಮಹಿಳೆಯರಿಗೆ ಅವಕಾಶ ಕೊಟ್ಟ, ಗೌರವಯುತವಾಗಿ ಪ್ರದರ್ಶನ ಮಾಡಿಸಿದ್ದು ಶ್ಲಾಘನೀಯ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಜವಳಿ ಇಲಾಖೆಯ ಉಪನಿರ್ದೇಶಕ ಅಜೀತ ನಾಯಕ್ ಮಾತನಾಡಿ, ಇಷ್ಟೊಂದು ಬಗೆಯ ಸೀರೆಗಳನ್ನು ಬೆಟಗೇರಿಯಲ್ಲಿ ತಯಾರಾಗುತ್ತಿರುವುದು ಹೆಮ್ಮೆಯ ವಿಷಯ ಹಾಗೂ ಆಶ್ಚರ್ಯವಾಗಿದೆ. ನಮಗೆ ಗೊತ್ತಿರಲಿಲ್ಲ ಈ ಫ್ಯಾಷನ್ ಶೋ ಮೂಲಕ ಗೊತ್ತಾಗಿದೆ. ಇನ್ನೂ ಮುಂದೆ ಇಲಾಖೆಯಿಂದ ಬೆಟಗೇರಿ ಭಾಗದ ಸೀರೆಗಳಿಗೆ & ನೇಕಾರಿಕೆಗೆ ಎಲ್ಲ ರೀತಿ ಸಹಾಯ-ಸಹಕಾರ ನೀಡುವುದಾಗಿ ಹೇಳಿದರು.

ನಿರ್ಮಲಾ ಕೊಳ್ಳಿ, ಶಶಿಕಲಾ ಶ್ಯಾವಿ, ಶೀಲಾ ಮಾಂತಗೊಂಡ ಮಾತನಾಡಿ, ಶ್ರೀ ಗಜಾನನೋತ್ಸವದ 50ನೇ ವರ್ಷದ ಸುವರ್ಣ ಮಹೋತ್ಸವದ ಅಂಗವಾಗಿ ಬೆಟಗೇರಿಯಲ್ಲಿ ಮಹಿಳೆಯರಿಂದ ಪಾರಂಪರಿಕ ಸೀರೆಗಳ ಫ್ಯಾಷನ್ ಶೋ ಇದೊಂದು ಹೊಸ ಪ್ರಯತ್ನ ಹಾಗೂ ರಾಜ್ಯದಲ್ಲಿಯೇ ಮಾದರಿಯಾಗಿದೆ. ಇದನ್ನು ಮುಂದುವರೆಸಿಕೊಂಡು ಹೋಗಬೇಕು ಹಾಗೂ ನೇಕಾರಿಕೆಯನ್ನು ಉಳಿಸಬೇಕಾದರೆ ಮಹಿಳೆಯರ ಪಾತ್ರ ಅತ್ಯಂತ ಅಶ್ಯಕವಾಗಿದೆ. ನಾವೆಲ್ಲರೂ ಬೆಟಗೇರಿಯಲ್ಲಿ ನೇಯ್ದಿರುವ ಸೀರೆಗಳನ್ನು ಬಳಸಿ ಪ್ರಚಾರ ಮಾಡುವುದರ ಮೂಲಕ ನೇಕಾರರಿಗೆ ನಮ್ಮ ಅಳಿಲು ಸೇವೆಯನ್ನು ಮಾಡೋಣವೆಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ವಿದ್ಯಾರಣ್ಯ ಯುವಕ ಸಂಘದ ಅಧ್ಯಕ್ಷ ಸಣ್ಣಚೌಡಪ್ಪ ಮಾಂತಗೊಂಡ ಪಾರಂಪರಿಕ ಸೀರೆಗಳ ಫ್ಯಾಷನ್ ಶೋ ಯಶಸ್ವಿಯಾಗಲು ಸಹಕರಿಸಿ, ಭಾಗವಹಿಸುವ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲರೂ ಅಭಿನಂದನಾರ್ಹರು ಎಂದರು.

30ಕ್ಕೂ ಹೆಚ್ಚು ವಿವಿಧ ಬಗೆಯ ಪಾರಂಪರಿಕ ಸೀರೆಗಳನ್ನು 45 ಮಹಿಳೆಯರು ಉಟ್ಟುಕೊಂಡು ರ‍್ಯಾಂಪನಲ್ಲಿ ಫ್ಯಾಷನ್ ಶೋ ಮಾಡಿದರು ಭಾಗವಹಿಸಿದ ಎಲ್ಲ ಮಹಿಳೆಯರಿಗೆ ಹಾಗೂ ಯುವತಿಯರಿಗೆ ಸನ್ಮಾನಿಸಿ ಗೌರವಿಸಲಾಯಿತು.



# ಗಜಾನನ ಯುವಕ ಮಂಡಳದಿಂದ ಮಹಾಅನ್ನಸಂತರ್ಪಣೆ

❑ ಸ್ನೇಹಜೀವಿ ನ್ಯೂಸ್

ಗದಗ ಸೆ.5 : ನಗರದ ವಾರ್ಡ ನಂ. 25 ರಲ್ಲಿ ಹಾಳದಿಬ್ಬ ಓಣಿಯ ಶ್ರೀ ಗಜಾನನ ಯುವಕ ಮಂಡಳ ವತಿಯಿಂದ ಇಂದು ಮಹಾಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು. ಕಳೆದ 32 ವರ್ಷಗಳಿಂದ ಗಜಾನನೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಹಾಗೂ ಸ್ಪರ್ಧಾತ್ಮಕ ಚಟುವಟಿ-ಕೆಗಳ ಕಾರ್ಯಕ್ರಮಗಳು ಜರುಗಿದವು. ಈ ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯರಾದ ವಿನಾಯಕ ಮಾನ್ವಿ ದಂಪತಿಗಳು ಡಾ. ಪಂಡಿತ ಪುಟ್ಟರಾಜ ಕವಿಗವಾಯಿಗಳರವರ 15ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಅನ್ನಸಂತರ್ಪಣೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿ ವಿನಾಯಕ ಮಾನ್ವಿಯವರು ಡಾ. ಪಂಡಿತ ಪುಟ್ಟರಾಜ ಗವಾಯಿಗಳವರು ಲಕ್ಷಾಂತರ ಅಂಧ, ಅನಾಥ ಮಕ್ಕಳಿಗೆ ಆಶ್ರಯ ನೀಡಿ ಸಂಗೀತ ಮತ್ತು ಶೈಕ್ಷಣಿಕ ದಾಸೋಹದ ಮೂಲಕ ನಡೆದಾಡುವ ದೇವರು ಎಂದು ಪ್ರಖ್ಯಾತರಾಗಿದ್ದರು. ಅವರ ಸ್ಮರಣೆಯನ್ನು ಮಾಡುತ್ತ ಈ ಮಹಾಅನ್ನಸಂತರ್ಪಣೆ ಪ್ರತಿ ವರ್ಷ ಜರುಗುವುದು ಎಂದು ನುಡಿದರು.ಅವರು ಎಷ್ಟೋ ಮಕ್ಕಳಿಗೆ ದಾರಿ ದೀಪವಾಗಿದ್ದರು ಎಂದರು.

ಈ ಸಂದರ್ಭದಲ್ಲಿ ಓಣಿಯ ಹಿರಿಯರು, ಯುವಕರು, ಮಹಿಳೆಯರು, ಮಕ್ಕಳು ಪ್ರಸಾದ ಸ್ವೀಕರಿಸಿ ಶ್ರೀ ಗಣೇಶ ಮತ್ತು ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ ಕೃಪೆಗೆ ಪಾತ್ರರಾದರು.

# ಲೋಕಾಯುಕ್ತ ದಾಳಿ, ಸರ್ಕಾರಿ ನೌಕರರಿಗೆ ಜೈಲು ಶಿಕ್ಷೆ,ದಂಡ ವಿಧಿಸಿ,ದೋಷಿ ಎಂದು ತೀರ್ಪು

❑ ಸ್ನೇಹಜೀವಿ ನ್ಯೂಸ್

**ಧಾರವಾಡ 05: ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿಬಿದ್ದ ಸರ್ಕಾರಿ ನೌಕರರ ಆರೋಪ ಸಾಬೀತಾಗಿದ್ದು, ಧಾರವಾಡ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ದೋಷಿ ಎಂದು ತೀರ್ಪು ನೀಡಿದ್ದಾರೆ.**



ಆಪಾದಿತ ಸರ್ಕಾರಿ ಅಧಿಕಾರಿಗಳಾದ ಮಧುಕರ ಘೋಡಕೆ,ಎಸ್.ಎನ್.ಲೀಲಾವತಿ ದೋಷಿಯಾಗಿದ್ದು,ಜೈಲು ಶಿಕ್ಷೆ ಮತ್ತು ದಂಡ ವಿಧಿಸಿ ಆದೇಶಿಸಲಾಗಿದೆ. ಧಾರವಾಡ ಲೋಕಾಯುಕ್ತ, ಎಸಿಬಿ ಪೊಲೀಸ್ ಠಾಣೆ ಕ್ರೈಂ ನಂಬರ 06/2017, ಕಲಂ.7,8,13(1) (ಡಿ) ಸಹ ಕಲಂ.13(2) ಪಿ.ಸಿ.ಆಕ್ಟ್-1988ರ ಆಪಾದಿತ ಸರ್ಕಾರಿ ಅಧಿಕಾರಿಗಳಿಗೆ ಜೈಲು ಶಿಕ್ಷೆ ವಿಧಿಸಲಾಗಿದೆ.

ಮಧುಕರ ಘೋಡಕೆ (ಸಹಾಯಕ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ, ಎಪಿಎಂಸಿ, ಹುಬ್ಬಳ್ಳಿ) ಎಸ್.ಎನ್.ಲೀಲಾವತಿ (ಎಸ್.ಡಿ.ಎ., ಕಾನೂನು ಮಾಪನ ಶಾಸ್ತ್ರ ಇಲಾಖೆ, ಎಪಿಎಂಸಿ, ಹುಬ್ಬಳ್ಳಿ) ಇವರನ್ನು 3ನೇ ಅಧಿಕ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯ, ಧಾರವಾಡದ ನ್ಯಾಯಾಧಿಶರಾದ ಜರೀನಾ ಅವರು ದೋಷಿಯೆಂದು ತೀರ್ಮಾನಿಸಿ ತೀರ್ಪು ನೀಡಿದ್ದಾರೆ.

ಮಧುಕರ ಘೋಡಕೆ ದೂರುದಾರ ಗೋಕುಲ ಸೌದಾಗರ ಮತ್ತು ಆತನ ಗೆಳೆಯ ಸುನೀಲ್ ಬಾಕಳೆ ಅವರ ಬಳಿ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ರಾಘವೇಂದ್ರ ಯಳವತ್ತಿ (ಬೆರಳಚ್ಚುಗಾರರು (ಗುತ್ತಿಗೆ ಆದ-ಾರ), ಕಾನೂನು ಮಾಪನ ಶಾಸ್ತ್ರ ಇಲಾಖೆ, ಎಪಿಎಂಸಿ, ಹುಬ್ಬಳ್ಳಿ) ಮುಖಾಂತರ 10,000 ರೂ. ಲಂಚದ ಹಣ ಪಡೆದುಕೊಂಡಿರುತ್ತಾರೆ.

ಎಸ್.ಎನ್.ಲೀಲಾವತಿ ಲಂಚದ ಹಣ ಕೊಡುವಂತೆ ದೂರುದಾರರಿಗೆ ಪ್ರಚೋದನೆ ನೀಡಿರುತ್ತಾರೆ. ಈ ಮೂಲಕ ಮೂವರು ಆರೋಪಿಗಳು ಅಪರಾಧದಲ್ಲಿ ಭಾಗಿಯಾಗಿ ನ್ಯಾಯಯುತವಾಗಿ ಮಾಡಬೇಕಾದ ಕೆಲಸಕ್ಕೆ ಲಂಚದ ಹಣ 10,000 ರೂ.ಗಳನ್ನು ಸ್ವೀಕ-ರಿಸುತ್ತಿರುವ ಸಮಯದಲ್ಲಿ ಲೋಕಾಯುಕ್ತ ಎಸಿಬಿ ಪೊಲೀಸ್ ಠಾಣೆ ಧಾರವಾಡ ಅಧಿಕಾರಿಗಳ ಬಲೆಗೆ ಬಿದ್ದು, ಅಂದಿನ ಲೋಕಾಯುಕ್ತ ಎಸಿಬಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಮೋದ ಸಿ. ಯಲಿಗಾರ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣದ ವಿಚಾರಣೆಯನ್ನು 3ನೇ ಅಧಿಕ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯ, ಧಾರವಾಡದ ನ್ಯಾಯಾಧಿಶರಾದ ಜರೀನಾ ಅವರು ದಿನಾಂಕ 04-09-2025ರಂದು ವಿಚಾರಣೆ ಪೂರ್ಣಗೊಳಿಸಿದ್ದರು.

ಮಧುಕರ ಘೋಡಕೆ, ಎಸ್.ಎನ್.ಲೀಲಾವತಿ ಇವರುಗಳ ವಿರುದ್ಧದ ಅಪರಾಧ ಸಾಬೀತಾಗಿದ್ದು, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಕಲಂ.7 ಅಡಿಯಲ್ಲಿ ತಲಾ 4 ವರ್ಷಗಳ ಸಾದಾ ಜೈಲು ಶಿಕ್ಷೆ ಹಾಗೂ ತಲಾ ರೂ.10,000 ದಂಡ ವಿಧಿಸಿರುತ್ತಾರೆ.

**ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಕಲಂ.13(1) (ಡಿ) ರೆ/ವಿ ಕಲಂ.13(2)ರ ಅಡಿಯಲ್ಲಿ ತಲಾ 5 ವರ್ಷಗಳ ಸಾದಾ ಜೈಲು ಶಿಕ್ಷೆ ಹಾಗೂ ತಲಾ ರೂ.10,000 ದಂಡ ವಿಧಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸರ್ಕಾರದ ಪರ ವಿಶೇಷ ಸರ್ಕಾರಿ ಅಭಿಯೋಜ-ಕರಾಗಿ ಎಸ್.ಎಸ್. ಶಿವಳ್ಳಿ ವಾದ ಮಂಡಿಸಿದ್ದರು.**

# ಅಸಭ್ಯ ಕಾಮೆಂಟ್ ಹಾಕೋರಿಗೆ ಜೈಲು ಫಿಕ್ಸ್.. ಫೇಕ್ ಐಡಿ ಆದ್ರೂ ಶಿಕ್ಷೆ ಗ್ಯಾರಂಟಿ :ಡಾ.ನಾಗಲಕ್ಷ್ಮಿ ಚೌಧರಿ ವಾರ್ನಿಂಗ್!

❑ ಸ್ನೇಹಜೀವಿ ನ್ಯೂಸ್



ಬೆಂಗಳೂರು: ಸೋಶಿಯಲ್ ಮೀಡಿಯಾದಲ್ಲಿ ಮಹಿಳೆಯರ ವಿರುದ್ಧ ಅಸಭ್ಯ ಕಾಮೆಂಟ್ ಹಾಕೋದು ದಿನೇ ದಿನೇ ಹೆಚ್ಚಾಗುತ್ತಿದ್ದು, ಇತ್ತೀಚೆಗೆ ನಟಿ ರಮ್ಯಾ ಅವರಿಗೂ ದರ್ಶನ್ ಫ್ಯಾನ್ಸ್ ಕೆಟ್ಟ ಕೆಟ್ಟದಾಗಿ ಕಾಮೆಂಟ್ ಹಾಕಿದ್ದರು. ಈ ಸಂಬಂಧ ರಮ್ಯಾ ದೂರು ಕೂಡ ದಾಖಲಿಸಿದರು. ಇದೀಗ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಹಿಳೆಯರ ವಿರುದ್ಧ ಅಸಭ್ಯ ಕಾಮೆಂಟ್‌ಗಳನ್ನು ಹಾಕುವವರಿಗೆ ಜೈಲು ಶಿಕ್ಷೆ ವಿಧಿಸುವ ಬಗ್ಗೆ ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಸಂದರ್ಶನವೊಂದರಲ್ಲಿ ಈ ವಿಷಯವನ್ನು ರಿವೀಲ್ ಮಾಡಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳ ಪೋಸ್ಟ್‌ಗೆ ಕಮೆಂಟ್ ಹಾಕುವಾಗ ಹೇಗೆ ಎಚ್ಚ-ರಿಕೆಯಿಂದ ಇರಬೇಕು ಎನ್ನುವ ಬಗ್ಗೆ ಅವರು ತಿಳಿಸಿದ್ದಾರೆ. ಈಚೆಗೆ ಸ್ಯಾಂಡಲ್ ವುಡ್ ನಟಿ ರಮ್ಯಾ ಅವರು, ತಮ್ಮ ವಿರುದ್ಧ ಅಶ್ಲೀಲ ಕಮೆಂಟ್ ಹಾಕಿದವರ ವಿರುದ್ಧ ಕೇಸ್ ದಾಖಲಿಸಿದ್ದಾರೆ. ಅವರನ್ನು ಅರೆಸ್ಟ್ ಮಾಡಲಾಗಿದೆ. ಅವರ ಪೈಕಿ ಹೆಚ್ಚಿನವರು ಗಾರೆ, ಕೂಲಿ ಕೆಲಸ ಮಾಡುವವರು. ಇಂಥ ಕಮೆಂಟ್ ಹಾಕಿದ್ದಕ್ಕೆ ಜೈಲು ಶಿಕ್ಷೆ, ಕೋರ್ಟ್, ಕಚೇರಿ ಅಲೆಯುವುದು ಬೇಕಾ ಎಂದಿದ್ದಾರೆ.

ಇನ್ನು ಫೇಕ್ ಐಡಿ ಬಳಸಿ ಅಸಭ್ಯ ಕಾಮೆಂಟ್‌ಗಳನ್ನು ಮಾಡಿದರೂ ತಪ್ಪಿತಸ್ಥರನ್ನು ಪತ್ತೆ ಹಚ್ಚಬಹುದು ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ತಿಳಿಸಿದ್ದಾರೆ.ಇನ್ನು ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಕೆಲವೊಂದು ವಿಷಯಗಳನ್ನು ಪೋಸ್ಟ್ ಮಾಡಿದಾಗ ತಮಗೂ ಇದೇ ರೀತಿಯ ಅನುಭವ ಆಗಿದೆ ಎಂದು ಡಾ.ನಾಗಲಕ್ಷ್ಮಿ ಹೇಳಿದರು. ಇದೇ ವೇಳೆ ಅವರು ಹೆಣ್ಣುಮಕ್ಕಳಿಗೂ ಮನವಿ ಮಾಡಿಕೊಂಡಿದ್ದಾರೆ. ಅದೇನೆಂದರೆ, ನಿಮ್ಮ ವಿರುದ್ಧ ಅಶ್ಲೀಲ ಎನ್ನುವ ಕಮೆಂಟ್ ಮಾಡಿದರೆ ಅಂಥವರ ವಿರುದ್ಧ ದೂರು ದಾಖಲು ಮಾಡಲು ಹಿಂಜರಿಯಬೇಡಿ, ಅಂಜಿಕೆ ಪಟ್ಟುಕೊಳ್ಳದೇ ದೂರು ದಾಖಲು ಮಾಡಿ ಎಂದು ಹೇಳಿದ್ದಾರೆ. ಆದ್ದರಿಂದ ಇನ್ನುಮುಂದೆ ಕಮೆಂಟ್ ಮಾಡುವಾಗ ಎಚ್ಚರಿಕೆಯಿಂದ ಇರಬೇಕು ಎನ್ನುವುದನ್ನು ಇದು ಸೂಚಿಸುತ್ತದೆ.

# ಶಾಸಕ ಬಿ.ಪಿ. ಹರೀಶ್ ವಿರುದ್ಧ ಕಾನೂನು ಕ್ರಮಕ್ಕೆ ಮಹಿಳಾ ಆಯೋಗ ಮನವಿ





ಕರ್ನಾಟಕ ರಾಜ್ಯ ಮಹಿಳಾ ಆಯೋಗ
ನಂ.107, ಕಾವೇರಿ ಭವನ, ಮೊದಲನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ. ರಸ್ತೆ, ಬೆಂಗಳೂರು-09,
ದೂರವಾಣಿ ಸಂಖ್ಯೆ:080-22216485/86, ಟೆಲಿಫ್ಯಾಕ್ಸ್: 080-22216485 ಈ-ಮೇಲ್: kscwbang123@gmail.com

ಸಂ:ಕರಾಮಆ/ಸ್ವಪ್ರೇರಿತ-148/2025-26 ದಿನಾಂಕ:04.09.2025

ಗೆ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ,
ಪೂರ್ವ ವಲಯ,
ದಾವಣಗೆರೆ ಜಿಲ್ಲೆ.

ಮಾನ್ಯರೇ,

ವಿಷಯ: ಮಹಿಳಾ ಪೊಲೀಸ್ ಅಧಿಕಾರಿಗೆ ಅವಹೇಳನಕಾರಿಯಾಗಿ ಮಾತನಾಡಿರುವ ಬಗ್ಗೆ
ಉಲ್ಲೇಖ: ಸಮೂಹ ಮಾಧ್ಯಮ ಹಾಗೂ ದಿನಪತ್ರಿಕೆಗಳ ವರದಿ ದಿನಾಂಕ:04.09.2025.

++++++++++

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಾಮನೂರು ಕುಟುಂಬದವರು ಒಂದು ಗಂಟೆ ತಡವಾಗಿ ಭೇಟಿಯಾದರೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ನಾಯಿಯ ರೀತಿಯಲ್ಲಿ ಅವರ ಬಾಗಿಲಿನಲ್ಲಿ ಕಾಯುತ್ತಾರೆ ಹಾಗೂ ಶಾಸಕರು ಸಭೆ-ಸಮಾರಂಭಗಳಿಗೆ ಬಂದರೆ ಎಸ್‌ಪಿ ಮುಖ ತಿರುಗಿಸಿಕೊಂಡು ಕುಳಿತಿರುತ್ತಾರೆ ಅಲ್ಲದೆ, ಅವರ ಮನೆಯವರು ಬಂದರೆ ನಾಯಿಯ ರೀತಿ ನಡೆದುಕೊಳ್ಳುತ್ತಾರೆ ಎಂದು ಹರಿಹರದ ಬಿಜೆಪಿ ಶಾಸಕರಾದ ಶ್ರೀ ಬಿ.ಪಿ.ಹರೀಶ್‌ರವರು, ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿಯಾದ ಶ್ರೀಮತಿ ಉಮಾ ಪ್ರಶಾಂತ್ ರವರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದು, ಈ ಸಂಬಂಧ ಅವರು, ಕೆ.ಟಿ.ಜೆ ನಗರ ಪೊಲೀಸ್ ಠಾಣೆಯಲ್ಲಿ ಬಿ.ಪಿ.ಹರೀಶ್ ರವರ ವಿರುದ್ಧ ದೂರು ದಾಖಲಿಸಿರುವ ಬಗ್ಗೆ ವರದಿಯಾಗಿರುತ್ತದೆ. ಮಹಿಳಾ ಅಧಿಕಾರಿಯ ವಿರುದ್ಧ ಅವಹೇಳನಕಾರಿಯ ಹೇಳಿಕೆಗಳನ್ನು ಸಾರ್ವಜನಿಕವಾಗಿ ಹೇಳಿ, ಅಪಮಾನಿಸುವುದನ್ನು ರಾಜ್ಯ ಮಹಿಳಾ ಆಯೋಗವು ತೀವ್ರವಾಗಿ ಖಂಡಿಸಿ, ಗಂಭೀರವೆಂದು ಪರಿಗಣಿಸಿರುತ್ತದೆ.

ಆದ್ದರಿಂದ ಸದರಿ ಪ್ರಕರಣದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಕ್ರಮ ಕೈಗೊಂಡು, ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ ಅತೀ ಶೀಘ್ರದಲ್ಲಿ ಕಳುಹಿಸಿ ಕೊಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,
ಕಾರ್ಯದರ್ಶಿ
ಕ.ರಾ.ಮ.ಆ. ಬೆಂಗಳೂರು.

ಪ್ರತಿಯನ್ನು: ಪೊಲೀಸ್ ಇನ್ಸ್‌ಪೆಕ್ಟರ್, ಕೆ.ಟಿ.ಜೆ.ನಗರ ಪೊಲೀಸ್ ಠಾಣೆ, ದಾವಣಗೆರೆ ಜಿಲ್ಲೆ.

❑ ಸ್ನೇಹಜೀವಿ ನ್ಯೂಸ್

ದಾವಣಗೆರೆ 05: ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರನ್ನು ಶಾಮನೂರು ಕುಟುಂಬದ ಮನೆಕಾಯುವ ನಾಯಿಗೆ ಹೋಲಿಕೆ ಮಾಡಿ ಹೇಳಿಕೆ ನೀಡಿರುವ ಶಾಸಕ ಬಿ.ಪಿ. ಹರೀಶ್ ಹೇಳಿಕೆಯನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಖಂಡಿಸಿದ್ದು, ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೂರ್ವವಲಯ ಪೊಲೀಸ್ ಮಹಾನಿರ್ದೇಶಕರಿಗೆ ಆಗ್ರಹಿಸಿದೆ.

ಎಸ್ಪಿ ಉಮಾ ಪ್ರಶಾಂತ್ ಅವರು ತಾವು ಹಾಜರಿರುವ ಕಾರ್ಯಕ್ರಮಗಳಿಗೆ ಆಗಮಿಸಿದಾಗ ಮುಖ ತಿರುಗಿಸುತ್ತಾರೆ. ಶಾಮನೂರು ಕುಟುಂಬದವರಿಗೆ ನಾಯಿ ರೀತಿ ನಡೆದುಕೊಳ್ಳುತ್ತಾರೆ ಎಂದು ಮಹಿಳಾ ಅಧಿಕಾರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿ ಅಪಮಾನಿಸಿರುವುದನ್ನು ಆಯೋಗದ ಕಾರ್ಯದರ್ಶಿಗಳು ಖಂಡಿಸಿದ್ದು,

ಕ್ರಮಕ್ಕೆ ಆಗ್ರಹಿಸಿ ಪತ್ರ ಮುಖೇನ ಮನವಿ ಮಾಡಿದ್ದಾರೆ.

# ಮತಪತ್ರಕ್ಕೆ ಶಿಫಾರಸ್ಸು; ಡಿಜಿಟಲೀಕರಣ-ಪಾರದರ್ಶಕತೆ ವಿರುದ್ಧ ರಾಜ್ಯ ಸರ್ಕಾರದ ಹೆಜ್ಜೆ

# ದಶಕಗಳ ಪ್ರಗತಿಗೆ ಮಾರಕವಾದ ನಡೆ; ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪ

❑ ಸ್ನೇಹಜೀವಿ ನ್ಯೂಸ್

**ನವದೆಹಲಿ : 05, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಇವಿಎಂ ಬಿಟ್ಟು ಮತಪತ್ರಕ್ಕೆ ಮಣೆ ಹಾಕುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ "ಡಿಜಿಟಲೀಕರಣ ಮತ್ತು ಪಾರದರ್ಶಕತೆ" ವಿರುದ್ಧ ಹೆಜ್ಜೆಯಿಟ್ಟಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಟೀಕಿಸಿದ್ದಾರೆ.**

ರಾಜ್ಯದಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತದಾನ ಪ್ರಕ್ರಿಯೆಗೆ ಇವಿಎಂ ಯಂತ್ರಗಳ ಬದಲಿಗೆ ಬ್ಯಾಲೆಟ್ ಪೇಪರ್ ಗಳನ್ನೇ ಬಳಸುವಂತೆ ಚುನಾವಣಾ ಆಯೋಗಕ್ಕೆ ಶಿಫಾರಸ್ಸು ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆಗೆ ಆಕ್ಷೇಪಿಸಿ ಸಚಿವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಹಿಂದಿನ ಕಾಲದ ಪದ್ಧತಿಯಂತೆ ಮತಪತ್ರವನ್ನೇ ಮರಳಿ ತರಲು ಹೊರಟಿರುವ ಕ್ರಮ ಪ್ರಗತಿ ವಿರುದ್ಧದ ಅತಿದೊಡ್ಡ ಹಿಮ್ಮುಖ ಹೆಜ್ಜೆಯಾಗಿದೆ ಎಂದು ಆರೋಪಿಸಿದ್ದಾರೆ.



ಭಾರತದ ತಂತ್ರಜ್ಞಾನ ರಾಜಧಾನಿ ಆಗಿರುವ ಕರ್ನಾಟಕವೇ ಇದೀಗ ತಂತ್ರಜ್ಞಾನವನ್ನು ತ್ಯಜಿಸುತ್ತಿರುವುದು ವಿಪರ್ಯಾಸ. ರಾಜ್ಯ ಕಾಂಗ್ರೆಸ್ ಸರ್ಕಾರದ ಈ ನಡೆ ರಾಷ್ಟ್ರದ ದಶಕಗಳ ಪ್ರಗತಿಯನ್ನು ಹಾಳು ಮಾಡುವ ಉದ್ದೇಶದ್ದಾಗಿದೆ ಎಂದು ಪ್ರಲ್ಹಾದ ಜೋಶಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮತದಾನಕ್ಕೆ ಬ್ಯಾಲೆಟ್ ಪೇಪರ್ ವ್ಯವಸ್ಥೆಗೆ ಹಿಂತಿರುಗುವುದರಿಂದ ಮತ್ತದೇ ಹಳೆಯ ಸಮಸ್ಯೆಗಳನ್ನು ತಂದೊಡ್ಡಲಿದೆ. ಹೆಚ್ಚಿನ ಅಮಾನ್ಯ ಮತಗಳು, ಮತಗಟ್ಟೆಗಳ ವಶ, ಮತ ಪ್ರಕ್ರಿಯೆಗಳಲ್ಲಿ ವಿಳಂಬ ಮತ್ತು ಬೃಹತ್ ವೆಚ್ಚದಾಯಕವಾಗಿದೆ. ಈ ಮೂಲಕ ರಾಜ್ಯ ಸರ್ಕಾರ ಪರಿಸರ ಮಾರಕ ಕ್ರಮಕ್ಕೆ ಕೈ ಹಾಕಿದೆ ಎಂದು ಜೋಶಿ ಖಂಡಿಸಿದ್ದಾರೆ.

ಇಷ್ಟೊಂದು ಬೃಹತ್ ಪ್ರಮಾಣದ ಕಾಗದ ಬಳಕೆ, ಮತ್ತು ಈ ಎಲ್ಲಾ ಪ್ರಕ್ರಿಯೆಗಳಿಗೆ ಅಧಿಕ ಸಿಬ್ಬಂದಿಗಳ ಬಳಕೆ, ಮತ್ತು ಮತ ಚಲಾವಣೆ ನಂತರ ಅವುಗಳ ರಕ್ಷಣೆ ಇವೆಲ್ಲ ಹೊರೆಯಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಭಾರತದ ಇವಿಎಂ ಕ್ರಾಂತಿಯಲ್ಲಿ ಕರ್ನಾಟಕದ ಪಾತ್ರ ಮಹತ್ವದ್ದಾಗಿದೆ. 1980ರ ದಶಕದಲ್ಲಿ ಇವಿಎಂಗಳನ್ನು ಪ್ರಾಯೋಗಿಕವಾಗಿ ಬಳಸಿದ ಮೊದಲ ನಗರಗಳ ಪೈಕಿ ಬೆಂಗಳೂರೂ ಒಂದು. 1990ರ ದಶಕದಲ್ಲಿ ರಾಜ್ಯದಲ್ಲಿ ಇವಿಎಂ ಅಳವಡಿಸಿಕೊಳ್ಳಲು ಪ್ರಮುಖ ಕಾರಣವಾಯಿತು. ಈಗ ನೋಡಿದರೆ ಕಾಂಗ್ರೆಸ್ ಸರ್ಕಾರ ಅದೆಲ್ಲಾ ಸಾಧನೆಯ ಗರಿಗೆ ಕೊಳ್ಳಿ ಇಡುತ್ತಿರುವಂತೆ ಕಾಣುತ್ತಿದೆ ಎಂದು ಸಚಿವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

VVPAT ಹೊಂದಿರುವ ಇವಿಎಂಗಳು ಭಾರತದ ಚುನಾವಣಾ ಪ್ರಕ್ರಿಯೆಯ ಬೆನ್ನೆಲುಬಾಗಿ ನಿಂತಿದೆ. ತ್ವರಿತ ಮತದಾನ, ವೇಗದ ಮತ ಎಣಿಕೆ ಪ್ರಕ್ರಿಯೆ, ಕನಿಷ್ಠ ಅಮಾನ್ಯ ಮತಕ್ಕೆ ನಾಂದಿ ಹಾಡಿದೆ ಮತ್ತು ಮತಗಟ್ಟೆ ವಶಪಡಿಸಿಕೊಳ್ಳುವ ಆಟದಿಂದ ರಕ್ಷಿಸಿದೆ. ಆದರೆ, ಕಾಂಗ್ರೆಸ್ ಸರ್ಕಾರ ಇದೆಲ್ಲವನ್ನೂ ಮರೆಮಾಚಿ ಮತ್ತದೇ ಆಟವಾಡಲು ಹೊರಟಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಟೀಕಿಸಿದ್ದಾರೆ.

# 'ಮಂತ್ರಾಲಯ, ಶಿರಡಿ ಸೇರಿ 8 ಧರ್ಮಕ್ಷೇತ್ರಗಳಿಗೆ 'ಶಿವ ಸಾಯಿ ಯಾತ್ರೆ' 'ಭಾರತ್ ಗೌರವ್' ರೈಲು ಆರಂಭ

❑ ಸ್ನೇಹಜೀವಿ ನ್ಯೂಸ್

**ಗದಗ : ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ 'ಭಾರತ್ ಗೌರವ್' ರೈಲು ಸಂಚಾರವನ್ನು ಮೊತ್ತಮೊದಲಿಗೆ ಆರಂಭಿಸಿದ 'ಸೌತ್ ಸ್ಟಾರ್ ರೈಲು' ಕಂಪನಿಯು ನವ ಬೃಂದಾವನ ಹಾಗೂ ಶ್ರೀಶೈಲ ಸೇರಿದಂತೆ 8 ಧರ್ಮಕ್ಷೇತ್ರಗಳಿಗೆ 'ಶಿವ ಸಾಯಿ ಯಾತ್ರೆ' ಎಂಬ ಹೊಸ ಪ್ರವಾಸ ಕಾರ್ಯಕ್ರಮ ರೂಪಿಸಿದ್ದು, ಅಕ್ಟೋಬರ್ 2ರಿಂದ ಈ ರೈಲು ಸಂಚಾರ ಆರಂಭಿಸಿದೆ.**

ಪ್ರವಾಸಿಗರು ರೈಲಿನಲ್ಲಿ ತೆರಳಿ ನವ ಬೃಂದಾವನ, ಮಂತ್ರಾಲಯ, ಪಂಡರಿಪುರ, ಶಿರಡಿ, ತ್ರಯಂಬಕೇಶ್ವರ, ಭೀಮಾಶಂಕರ, ಗುಷ್ನೇಶ್ವರ ಹಾಗೂ ಶ್ರೀಶೈಲಂ ಧರ್ಮಕ್ಷೇತ್ರಗಳ ದರ್ಶನ ಮಾಡಬಹುದು. ಒಟ್ಟು 11 ದಿನಗಳ ಈ ಪ್ರವಾಸವು ಎಲ್ಲೋರಾ ಗುಹೆಗಳ ಭೇಟಿಯನ್ನೂ ಒಳಗೊಂಡಿದೆ.

ರೈಲು ಬಂಗಾರಪೇಟೆಯಿಂದ ಹೊರಡಲಿದ್ದು, ಪ್ರವಾಸಿಗರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಬೆಂಗಳೂರಿನ ವೈಟ್ ಫೀಲ್ಡ್, ಯಲಹಂಕ, ಧರ್ಮಾವರಂ, ಅನಂತಪುರ, ಬಳ್ಳಾರಿ, ಹೊಸಪೇಟೆಯಲ್ಲೂ ರೈಲು ಹತ್ತಬಹುದು. ಆನ್ ಬೋರ್ಡ್ ಘೋಷಣಾ ವ್ಯವಸ್ಥೆ, ನಿಯೋಜಿತ ಕೋಚ್ ಭದ್ರತಾ ಸಿಬ್ಬಂದಿ, ಟೂರ್ ಮ್ಯಾನೇಜರ್‌ಗಳು, ಪ್ರಯಾಣ ವಿಮೆ, ಹೋಟೆಲ್ ವ್ಯವಸ್ಥೆ, ಸೈಟ್ ಸೀಯಿಂಗ್, ಅನಿಯಮಿತ ದಕ್ಷಿಣ ಭಾರತದ ಊಟ ಇತ್ಯಾದಿ ಸೌಲಭ್ಯಗಳನ್ನು ಇದು ಒಳಗೊಂಡಿರುತ್ತದೆ. ಈ ಪ್ರವಾಸಕ್ಕೆ ಎಲ್ ಟಿ ಸಿ/ಎಲ್ ಎಫ್ ಸಿ ಅನ್ವಯವಾಗಲಿದ್ದು, ಭಾರತೀಯ ರೈಲ್ವೆಯ ಶೇಕಡಾ 33ರಷ್ಟು ಸಹಾಯಧನ ಲಭ್ಯವಾಗಲಿದೆ ಎಂದು ವಿಘ್ನೇಶ್ ಅವರು ವಿವರಿಸಿದ್ದಾರೆ.

**ದರಗಳು ಇಂತಿವೆ:** ಸ್ಲೀಪರ್ (ರೂ 27,700), 3ಎಸಿ (ರೂ 37,000), 2ಎಸಿ ಡೀಲಕ್ಸ್ (ರೂ 43,000), ಎಸಿ ಲಕ್ಷುರಿ (ರೂ 47,900). ಆಸಕ್ತರು 93550 21516 ಸಂಪರ್ಕಿಸಿ ಅಥವಾ ಆನ್ ಲೈನ್ ನಲ್ಲಿ ತಿತಿತಿ. ಣಾಂಣಾಡಿಣಾಬಟಚಿ.ಣಿಟಿ ಮೂಲಕ ಬುಕಿಂಗ್ ಮಾಡಬಹುದಾಗಿದೆ.

ದೇಶದ ಮುಂಚೂಣಿ ಪ್ರವಾಸಿ ರೈಲು ನಿರ್ವಾಹಕ ಸಂಸ್ಥೆಯಾದ ಟೂರ್ ಟೈಮ್ಸ್ ಸಹಭಾಗಿತ್ವದಲ್ಲಿ ಈ ಯೋಜನೆ ರೂಪಿಸಲಾಗಿದೆ ಎಂದು 'ಸೌತ್ ಸ್ಟಾರ್'ನ ಪ್ರಾಡಕ್ಟ್ ಡೈರೆಕ್ಟರ್ ವಿಘ್ನೇಶ್ ಜಿ. ತಿಳಿಸಿದ್ದಾರೆ.



❑ ಸ್ನೇಹಜೀವಿ ನ್ಯೂಸ್

ಹುಬ್ಬಳ್ಳಿಯ : ವಿಶಾಲನಗರದಲ್ಲಿ ಮದರಸಾ ಮಕ್ಕಳ ಜೊತೆ ಮೊಹಮ್ಮದ್ ಪೈಗಂಬರ್ ರವರ ಜೀವನ್ ಚರಿತ್ರೆ ,ಪ್ರೀತಿ ,ಶಾಂತಿ,ದಾನ,ಧರ್ಮದ ಸಂದೇಶ ಸಾರುತ್ತ ಮೆರವಣಿಗೆ ಮೂಲಕ ಅರ್ಥಪೂರ್ಣ ಈದ್ ಮಿಲಾದ್ ಆಚರಣೆಯಲ್ಲಿ ಪಾಲ್ಗೊಂಡ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಾಗರಾಜ ಗೌರಿ ಇದ್ದರು.

ಸ್ನೇಹಜೀವಿ
ಉತ್ತರ ಕರ್ನಾಟಕದ ಧ್ವನಿಯಾಗಿ
ಕನ್ನಡ ದಿನಪತ್ರಿಕೆ
ಪತ್ರಿಕೆ ಬರುತ್ತಿಲ್ಲವೇ?
ಪ್ರಿಯ ಓದುಗರೇ,
ಸ್ನೇಹಜೀವಿ
ದಿನಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿರಿ. ಮೋ: 9482770999

# ಪತ್ರಕರ್ತ ಪ್ರಕಾಶ ಗುಳೇದಗುಡ್ಡ ಹೃದಯಾಘಾತದಿಂದ ನಿಧನ



❑ ಸ್ನೇಹಜೀವಿ ನ್ಯೂಸ್

ಬಾಗಲಕೋಟೆ: ಕಮತಗಿಯ ಪತ್ರಕರ್ತ ಪ್ರಕಾಶ ಗುಳೇದಗುಡ್ಡ(42) ತೀವ್ರ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಬೆಳಗ್ಗೆ ಮನೆಯಲ್ಲಿ ಎದೆ ನೋವು ಕಾಣಿಸಿಕೊಂಡಿದ್ದರಿಂದ, ತಕ್ಷಣ ಅವರನ್ನು ಆಸ್ಪತ್ರೆಗಾಗಿ ಬಾಗಲಕೋಟೆಗೆ ಕರೆತರಲಾಯಿತು. ಆಸ್ಪತ್ರೆ ತಲುಪುವ ಹೊತ್ತಿಗೆ ಅವರ ಪ್ರಾಣಪಕ್ಷಿ ಹಾರಿದೆ.

ಪ್ರಕಾಶ ಗುಳೇದಗುಡ್ಡ ಅವರು ಸಂಂ-ಯುಕ್ತ ಕರ್ನಾಟಕ ಪತ್ರಿಕೆ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸಿರುವ ಅವರು ಪತ್ನಿ, ಪುತ್ರಿ, ಪುತ್ರ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇಂದು ಬೆಳಗಿನ ಜಾವ ಮನೆಯಲ್ಲಿ ಇದ್ದಾಗ ಎದೆ ನೋವು ಕಾಣಿಸಿ ಕೊಂಡಿದ್ದು, ತಕ್ಷಣ ಅವರನ್ನು ಬಾಗಲಕೋಟೆ ಆಸ್ಪತ್ರೆಗೆ ದಾಖಲಿಸಲಾಯಿತು. ಆಸ್ಪತ್ರೆ ತಲುಪುವ ಹೊತ್ತಿಗೆ ಜೀವ ಬಿಟ್ಟಿದ್ದಾರೆ.

ತಾವು ಕಲಿತ ಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ ಏರ್ಪಡಿಸುವ ಸಿದ್ಧತೆಯಲ್ಲಿದ್ದ ಅವರು ಶಿಕ್ಷಕರ ದಿನಾಚರಣೆಯಂದು ಅಗಲಿ ಜೀವಗಳಿಗೆ ನಮನ ಎಂದು ತಮ್ಮ ಗುರುಗಳನ್ನು ನೆನದು ಭಾವುಕ ಪೋಸ್ಟ್ ಹಾಕಿದ್ದರು. ಅದನ್ನು ಹಾಕಿ ಕೆಲವೇ ಗಂಟೆಗಳಲ್ಲಿ ಅವರು ಜೀವ ಬಿಟ್ಟಿದ್ದಾರೆ. ಮೃತರ ಅಂತ್ಯಕ್ರಿಯೆ ಸೆ.5ರ ಸಂಜೆ 5 ಗಂಟೆಗೆ ಕಮತಗಿಯಲ್ಲಿ ಜರುಗಿದೆ.

Snehajeevi Kannada Daily, Printed and Published and owned by ABDULHAMEED SHALAGAR House No. 6421 Rajput Oni, Betageri-Gadag, State : Karnataka
Editor : ABDULHAMEED SHALAGAR, Printed at : Prabhu Graphics, 3094A, Station Road Gadag, District Gadag 582 101 State : Karnataka